ವಾರದ ಮುಂಗಾರು

ಭಾನುವಾರ 28-5-1989

ಕುರುಕ್ಷೇತ್ರ ಯುದ್ಧದ ಸೂತ್ರಧಾರ-ಅರ್ಜುನನ ರಥವನ್ನು ನಡೆಸಿದ ವೀರ ಸಾರಥಿ (ಎ. ಡಿ. 5ನೇ ಶತಮಾನದ್ದೆಂದು ಹೇಳಲಾಗುವ ಒಂದು ವಿಗ್ರಹ ಮಥುರಾದಲ್ಲಿ)

ಕುರುಕ್ಷೇತ್ರ ಯುದ್ಧ: ಕಾವ್ಯ ಸಂಕಲ್ಪವೊ ಚರಿತ್ರ ಸತ್ಯವೋ?

ಪೂಯಕ್ಕರ ಕೆ. ಗಣೇಶ

ಮಹಾಭಾರತಯುದ್ಧ! ಭಾರತದ ಜನರ ಹೃದಯ ಸಿಂಹಾಸನದಲ್ಲಿ ಇವತ್ತಿಗೂ ಸರಿ-ತಪ್ಪುಗಳ ಸಮುದ್ರಮಥನ ನಡೆಸುತ್ತಿರುವ ಈ ಮಹಾಭಾರತ ಯುದ್ಧ ಚಾರಿತ್ರಿಕ ಸತ್ಯವೋ ಅಥವಾ ಕೇವಲ ಕಾವ್ಯ ಸಂಕಲ್ಪವೋ? ಹರ್ಯಾಣ, ಉತ್ತರಪ್ರದೇಶ, ಮಧ್ಯಪ್ರದೇಶಗಳ ವಿಸ್ತಾರ ಯಮುನಾ ಬಯಲಿನುದ್ದಕ್ಕೂ ಹರಡಿರುವ ದಂತಕಥೆಗಳ ಹಿನ್ನೆಲೆಯಲ್ಲಿ ಪುರಾತತ್ವ ಸಾಕ್ಷ್ಯಗಳ ಜತೆ ಪುರಾಣಗಳನ್ನು ಒರೆಗೆ ಹಚ್ಚಿ ಬೆಳಕು ಬೀರುವ ಪ್ರಯತ್ನ-ಈ ಲೇಖನ.

'ಮಹಾಭಾರತ' ಕಥೆಯು ನಾಗರಿಕತೆಯೂ, ವಿಪುಲವಾದ ಸಾಮ್ರಾಜ್ಯಗಳೂ ಭಾವನೆಯ ಸಂಕಲ್ಪವಾಗಿದೆ. ಚಕ್ರಗ್ರಾಮವರ್ಗಗಳ ತವಸ್ಕಾಗೆ ನಡೆಸಿದ ಸಂಘಟನೆಗಳಲ್ಲಿದೆ ಅಕ್ಷೋಹಿಣಿಗಳ ಯುದ್ಧ ನಡೆದಿರುವುದಕ್ಕೆ ಪುರಾವೆಗಳೇನೂ ಪುರಾವಸ್ತುಗವೇಷಕರಿಗೆ ಈ ವರೆಗೆ ಸಿಕ್ಕಿಲ್ಲ.

ವೀರಾರಾಧನೆಯಲ್ಲಿ ವಿಶ್ವಾಸವಿದ್ದ ಒಂದು ಗುಂಪು ಅವತಾರ ಕತೆಗಳ ದಿವ್ಯ ಸಂದೇಶವನ್ನು ಪ್ರಚಾರಿಸಿದಾಗ ತರ್ಕದ ಗೊಡವೆಯಿಲ್ಲದೆಯೇ ಭಕ್ತಿಯ ಲಹರಿಯಲ್ಲಿದ್ದ ಕೆಲವು ವರ್ಗ ಅವನ್ನು ನಂಬಿತು. ಶತಮಾನಗಳ ಪುನರಾವರ್ತನೆ ಅದನ್ನು ಶ್ರದ್ಧಾಮೂಲವಾದ ವಿಶ್ವಾಸವಾಗಿ ಮಾರ್ಪಡಿಸಿತು. ಭಕ್ತಿಯ ವಾತಾವರಣದಲ್ಲಿ ಈ ವಿಶ್ವಾಸಗಳು ಅನಶ್ವರವಾಗಿ ಬೆಳೆದು ನಿಂತವು. ಜನರ ಭಾವ ಭಕ್ತಿ ಆ ಕಡೆ ತಿರುಗಿತೇ ಹೊರತು ಚರಿತ್ರಾನ್ವೇಷಣೆಗೆ ಹೆಚ್ಚಿನ ಪ್ರಾಧಾನ್ಯತೆ ದೊರಕಲಿಲ್ಲ.

ಆದರೂ ಇದರ ಸತ್ಯಾನ್ವೇಷಣೆಗೆ ಹೊರಟ ಕೆಲವರು ಚರಿತ್ರಾನ್ವೇಷಕರು ಅವತಾರ ಕತೆಗಳೂ ವೀರಾರಾಧನೆಯೂ ಇರುವ ರೂಪ ಕಲ್ಪನಾಮಯವಾದ ಅಂತರ್ಲೋಕದ ಚಿತ್ರವನ್ನು ತೋರಿಸುವ ಇತಿಹಾಸಗಳನ್ನು ಚರಿತ್ರೆಯಿಂದ ಸಾಹಿತ್ಯದ ಕಡೆಗೆ ತಿರುಗಿಸಿದರು.

ಅದರಲ್ಲಿ ಚರಿತ್ರಗಾಥೆಯಾದ ಯಾವುದೋ ಎಲ್ಲಿಯೋ ಅಡಗಿಕೊಂಡಿರುವುದರಿಂದಾಗಿ ಚರಿತ್ರಾನ್ವೇಷಣೆ ಮತ್ತೆ ಮತ್ತೆ ಆ ಕಡೆ ತಿರುಗುತ್ತಿರುವುದು ಲೋಕೇತಿಹಾಸಗಳಲ್ಲಿ ಅತಿ ಬೃಹತ್ತಾದ ಮಹಾಭಾರತ ಕತೆಯ ಕಡೆಗೆ ವಸ್ತುನಿಷ್ಠವಾದ ಒಂದು ಅನ್ವೇಷಣೆ ಆರಂಭವಾಗುವಾಗ ಅದರ ಚರಿತ್ರ ಮೌಲ್ಯ ಕಾಯುವುದು ಸಾಧ್ಯವೇ?

ಭಾರತ ಯುದ್ಧ ನಡೆದುದೆಲ್ಲಿ? :

ಶತಮಾನಗಳಿಂದ ಯುಗಾಗ್ನಿಯಲ್ಲಿ ವಿಮರ್ಶಿಸಿ ತೆಗೆದ ಆರ್ಯ ಸಂಸ್ಕಾರದ ಪ್ರಮುಖ ಸಂಕೇತಗಳಾದ ಆರ್ಯಾವರ್ತ, ಬ್ರಹ್ಮದೇಶ, ಬ್ರಹ್ಮರ್ಷಿ ದೇಶ, ಎಂಬೀ ಉತ್ತರಭಾರತ ಭೂವಿಭಾಗಗಳಾಗಿವೆ ಮಹಾಭಾರತದ ಕತೆಯ ಮೂಲಸ್ಥಾನ.

ಯಮುನಾ ನದಿಯ ಪಶ್ಚಿಮದ ತೀರ ಪ್ರದೇಶದಿಂದ ಗಂಗಾನದಿಯ ಪೂರ್ವ ಸಮತಲದವರೆಗೆ ವ್ಯಾಪಿಸಿದೆ. ಈ ಇತಿಹಾಸದ ಕಥಾ ಪಾತ್ರಗಳೂ ಅದರ ಘಟನೆಗಳೂ ಧಾರಾಳ ತೀರ್ಥ ಯಾತ್ರಿಕರನ್ನು ಆಕರ್ಷಿಸುತ್ತಿರುವ ಹರಿಯಾಣಾದ ಪುಣ್ಯ ಪ್ರದೇಶವಾದ ಕುರುಕ್ಷೇತ್ರವಾಗಿದೆ. ಮಹಾಭಾರತ ಯುದ್ಧ ನಡೆದ ಸ್ಥಳ (?.) ಪಾಂಡವರ ರಾಜಧಾನಿಯಾಗಿದ್ದ ಹಸ್ತಿನಾಪುರ ಉತ್ತರ ಪ್ರದೇಶದ ಮೀರತ್ ಜಿಲ್ಲೆಯಲ್ಲಿದೆ. ಪಾಂಡವರನ್ನು ಕೊಲ್ಲುವುದಕ್ಕಾಗಿ ಕೌರವರು ನಿರ್ಮಿಸಿದ ಅರಗಿನ ಮನೆ ಇದ್ದುದೂ ಮೀರತ್ ಜಿಲ್ಲೆಯ ಬರ್ನಾವಾ ಎಂಬ ಗ್ರಾಮದಲ್ಲಿ.

ಜೂಜಾಟದಲ್ಲಿ ಸೋತು ವನವಾಸವನ್ನು ಅನುಭವಿಸಿದ ಪಾಂಡವರು ಕೊನೆಯ ಒಂದು ವರ್ಷದ ಅಜ್ಞಾತ ವಾಸವನ್ನನುಭವಿಸಿದ ವಿರಾಟದೇಶ ರಾಜಸ್ಥಾನದ ಜಯಪುರ ಜಿಲ್ಲೆಯಾಗಿದೆ. ಮಹಾಭಾರತ ಕತೆಯ ಆತ್ಮಕ್ಕಿಲ ಕಥಾಪಾತ್ರವೂ, ಕುರುಕ್ಷೇತ್ರ ಯುದ್ಧದ ಸೂತ್ರಧಾರನೂ ಆಗಿದ್ದ ಶ್ರೀಕೃಷ್ಣ ಜನಿಸಿದ ಮಥುರಾ ಉತ್ತರ ಪ್ರದೇಶದಲ್ಲಿದೆ.

ಮಹಾಭಾರತದೊಂದಿಗೆ ಸಂಬಂಧ ವಿರುವ ಇನ್ನೊಂದು ಸ್ಥಳವಾಗಿದೆ ಉತ್ತರ ಪ್ರದೇಶದ ಅಹಿಚ್ಛತ್ರ ಮಹಾಭಾರತದ ಇಂದ್ರಪ್ರಸ್ಥ ಈಗಿನ ದೆಹಲಿಯಾಗಿದೆ.

ಜನ ಮತ್ತು ಜನಪದ: ಪೂರ್ವ ಮಗಧ, ಕಾಶಿ, ವತ್ಸ, ಚೆದಿ, ಕರೂಷ. ದಶಾರ್ಣ, ಪಾಂಚಾಲ ಎಂಬೀ ಜನಪದಗಳು ಮಧ್ಯಪ್ರದೇಶದಿಂದಲೂ ವೃಷ್ಣಿಯರು, ಯಾದವರು, ಅಭಿಸಾರರು ಎಂಬೀ ಜನರು ದಕ್ಷಿಣ, ಪಶ್ಚಿಮ, ಕಾಶ್ಮೀರದಿಂದಲೂ ಪಾಂಡವ ಪಕ್ಷದಲ್ಲಿ ಯುದ್ಧಮಾಡುವುದಕ್ಕಾಗಿ ಬಂದವರೆಂದು ಮಹಾಭಾರತದಿಂದ ಗೊತ್ತಾಗುತ್ತದೆ.

ವಿದೇಹ, ಅಂಗ, ವಂಗ, ಕಲಿಂಗ ಎಂಬೀ ಜನಪದ ಪೂರ್ವದಿಂದಲೂ ಮಾಹಿಷ್ಮತಿ, ಅವಂತಿ, ವಿದರ್ಭ, ನಿಷಾದ, ಸಾವಿರ ಎಂಬೀ ಜನಪದಗಳ ದಕ್ಷಿಣದಿಂದಲೂ ಗಾಂಧಾರ, ತ್ರಿಗರ್ತ, ಕೇಕಯ, ಮದ್ರ, ಕಾಂಬೋಜ ಮುಂತಾದ ಜನರು ಉತ್ತರ–ಪಶ್ಚಿಮದಿಂದಲೂ ಕೋಸಲ, ಶೂರಸೇನ ಮುಂತಾದ ಜನರು ಮಧ್ಯದೇಶದಿಂದಲೂ ಕೌರವ ಪಕ್ಷದಲ್ಲೂ ಯುದ್ಧ ಮಾಡುವುದಕ್ಕಾಗಿ ಬಂದಿದ್ದರು.

ಕಾಶ್ಮೀರ, ಪಂಜಾಬ್, ಹರಿಯಾಣ, ಸಿಂಧ್, ಸೌರಾಷ್ಟ್ರ, ಗುಜರಾತ್, ಉತ್ತರ ಪ್ರದೇಶ, ಅಸ್ಸಾಂ, ಬಿಹಾರ, ಎಂಬೀ ಸಂಸ್ಥಾನಗಳ ಸುಮಾರು 350 ಸ್ಥಳಗಳು ಮಹಾಭಾರತದ ವಿವಿಧ ಸಂಘಟನೆಗಳೊಂದಿಗೆ ಸಂಬಂಧವಿರಿಸಿಕೊಂಡಿವೆ.

ಯುದ್ಧ ನಡೆದುದು ಯಾವಾಗ:– ದೀರ್ಘ ಕಾಲದಿಂದಲೂ ಚರಿತ್ರ ಪಂಡಿತರೊಳಗೆ ದೊಡ್ಡ ಸಮಸ್ಯೆಯನ್ನುಂಟುಮಾಡುತ್ತಿದ್ದ ವಿವಾದ ಪರವಾದ ಒಂದು ಪ್ರಶ್ನೆಯಾಗಿದೆ. ಮಹಾಭಾರತ ಯುದ್ಧದ ಕಾಲವೂ ಚರಿತ್ರ ಮೂಲವೂ ಆಗಿದೆ.

ಭಾಷಾವೇದವೇಷಕರರೂ, ಜ್ಯೋತಿಷ್ಯ ಪಂಡಿತರೂ, ಚರಿತ್ರಕಾರರೂ, ಪುರಾವಸ್ತುವಿದ್ವಾಂಸರೂ ಪರಸ್ಪರ ವಿರುದ್ಧವಾದ ಧಾರಾಳ ಕಾಲ ನಿರ್ಣಯ ವಾದಗಳನ್ನು ಮುಂದಿರಿಸುತ್ತಾ ಕ್ರಿ. ಪೂ. 5000 ವರ್ಷಗಳಿಂದ 6ನೇ ಶತಮಾನದ ವರೆಗಿರುವ ವಿವಿಧ ಕಾಲಗಳನ್ನು ಸೂಚಿಸುತ್ತಾರೆ.

ಆದರೆ ವೈದಿಕರೂ ಸಂಸ್ಕೃತ ಪಂಡಿತರೂ ಕ್ರಿ. ಪೂ. 3100ನೇ ವರ್ಷವೆಂದು ಸಾಮಾನ್ಯವಾಗಿ ಅಂಗೀಕರಿಸಿದ್ದಾರೆ. ಋಗ್ವೇದದ ಸಂಕಲದ

ಪಳೆಯುಳಿಕೆಯನ್ನು ನಿರ್ಣಯಿಸದೆ ಕಾಲವನ್ನು ಹೇಳುವಂತಿಲ್ಲ.

ಕಾಲವನ್ನು ಚರಿತ್ರಕಾರರಲ್ಲಿ ಹಲವರು ಸ್ವೀಕರಿಸಿದ್ದಾರೆ. ಋಗ್ವೇದ ಕಾಲವೇ ಕ್ರಿ. ಪೂ. 100ನೇ ವರ್ಷದಿಂದ 2000ನೇ ವರ್ಷದ ಪೂರ್ವಾರ್ಧದ ವರೆಗಿದೆ ಎಂದು ಹೇಳುವವರೂ ಅದನ್ನು ಅಲ್ಲಗಳೆಯುವವರೂ ಧಾರಾಳ ಇರುವುದರಿಂದ ಸ್ವಾಭಾವಿಕವಾಗಿಯೇ ಇಲ್ಲಿ ವ್ಯತ್ಯಾಸ ಕಂಡು ಬರುತ್ತದೆ.

ಮಹಾಭಾರತದ ಜ್ಯೋತಿಷ್ಯ ಸೂಚನೆಗಳ ಆಧಾರದಲ್ಲಿರುವ ಕಾಲ ನಿರ್ಣಯಗಳೂ ಪರಸ್ಪರ ವಿರುದ್ಧವಾಗಿವೆ. ಕ್ರಿ. ಪೂ. 9ನೇ ಶತಕದಿಂದ 6ನೇ ಶತಕದ ವರೆಗಿನ ಕಾಲಘಟ್ಟವಾಗಿದೆ. ಪುರಾವಸ್ತು ಗವೇಷಕರಲ್ಲಿ ಹಲವರು ಸ್ವೀಕರಿಸಿರುವುದು.

ಋಗ್ವೇದದ ಕೆಲವು ಜ್ಯೋತಿಷ್ಯ ಸೂಚನೆಗಳನ್ನಿಟ್ಟು ಲೆಕ್ಕ ಹಾಕಿ ಚಂದ್ರಗುಪ್ತ ಮೌರ್ಯ ಕಾಲ ಕ್ರಿ. ಪೂ. 1536 ಎಂದು ನಿಶ್ಚಯಿಸಿ ಅಲ್ಲಿಂದ ಯುಧಿಷ್ಠಿರನ ವರೆಗಿರುವವರ ಲೆಕ್ಕ ಹಾಕಿ ನೋಡಿ ಮಹಾಭಾರತ ಯುದ್ಧ ಕಾಲ ಕ್ರಿ. ಪೂ. 5000ನೇ ಇಸವಿ ಎಂದು ವಾದಿಸುವ ಜ್ಯೋತಿಷ್ಯ ಪಂಡಿತರೂ ಇದ್ದಾರೆ.

ಕುರುಕ್ಷೇತ್ರ ಯುದ್ಧ ಸಮಯದ ರಾಶಿಗನುಸಾರವಾಗಿ ಗುರು ವಿಶಾಖ ನಕ್ಷತ್ರಕ್ಕೆ ಸಮೀಪವೂ ಶನಿಶುಕ್ರನಿಗೆ ಸಮೀಪವೂ ಇಂತಿತ್ತು ಎಂದೂ ಮಹಾಭಾರತದ ಜ್ಯೋತಿಷ್ಯ ಸೂಚನೆಯನ್ನನುಸರಿಸಿ, ಕ್ರಿ. ಪೂ. 3142ರಿಂದ ವ್ಯಕ್ತವಾಗಿದೆ. ಯುದ್ಧಕಾಲವೆಂದು ಕೆಲವರು ಲೆಕ್ಕ ಹಾಕಿದ್ದಾರೆ.

ಭಾರತದ ಸಾಂಸ್ಕೃತಿಕ ಚರಿತ್ರೆಗೆ ಇಷ್ಟು ದೂರ ಹಿಂದಕ್ಕೆ ಸರಿಯಲು ಸಾಧ್ಯವಿಲ್ಲೆಂದು ಹೇಳಲಿಕ್ಕಾಗದು. ಹಾಗಾದರೆ ಮ ಹಾ ಭಾ ರ ತ ಯುದ್ಧ ಈ ಕಾಲಘಟ್ಟದಲ್ಲಾಗಿರಲೂ ಸಾಧ್ಯವಿದೆಯೇ ? ಹೀಗೆಯೇ ಭಿನ್ನಾಭಿಪ್ರಾಯ ನೀಡುವ ಹಲವು ಜ್ಯೋತಿಷ್ಯ ಗಣಿತಗಳಿವೆ.

ಯುಧಿಷ್ಠಿರನು ರಾಜಸೂಯ ನಡೆಸಿದಾಗ ಅಮಾವಾಸ್ಯೆಯಾಗಿತ್ತೆಂದೂ ಸೂರ್ಯನು ಜ್ಯೇಷ್ಠದೊಂದಿಗೂ ಮೂಲ ನಕ್ಷತ್ರದೊಂದಿಗೂ 240.2ಡಿಗ್ರಿಯಲ್ಲಿದ್ದನೆಂದೂ ಯುದ್ಧಕ್ಕೆ ಮೊದಲು ಅಮಾವಾಸ್ಯೆಯಾಗಿದ್ದು ಸೂರ್ಯನು ನಕ್ಷತ್ರಗಳೊಂದಿಗೆ 224.75 ಡಿಗ್ರಿಯಲ್ಲಿದ್ದನೆಂದೂ ಸೂಚಿಸುವ ಮಹಾಭಾರತದ ಒಂದು ಜ್ಯೋತಿಷ ಪರಾಮರ್ಶೆಯನ್ನನುಸರಿಸಿ ಯುದ್ಧ ಕಾಲ ಕ್ರಿ. ಪೂ. 3093 ಎಂಬುದೊಂದು ಉದಾಹರಣೆಯಾಗಿದೆ.

ಕರ್ಣ ಪರ್ವದಲ್ಲಿ ಯುದ್ಧದ 17ನೇ ದಿನದ ಗ್ರಹ ನೆಲೆಯ ಕುರಿತಿರುವ ವಿವರಣೆಯನ್ನನುಸರಿಯೂ ಯುಧಿಷ್ಠಿರನ ಅಶ್ವಮೇಧಯಾಗ ಸಮಯದ ರಾಶಿ ನೆಲೆಯ ಈ ಇರುವ ವಿಮರ್ಶೆಯನ್ನು ಕೆಲವರು ಲೆಕ್ಕ ಹಾಕಿದ ಕುರುಕ್ಷೇತ್ರ ಯುದ್ಧಕಾಲ ಶುದ್ಧ ಅಬದ್ಧಗಳೆಂದೇ ಹೇಳಬೇಕು.

6ನೇ ಶತಮಾನದ ಸುಮಾರಿಗೆ ಜೀವಿಸಿದ್ದ ವರಾಹ ಮಿಹಿರನು ತನ್ನ ಬೃಹತ್ ಸಂಹಿತೆಯಲ್ಲಿ ಯುಧಿಷ್ಠಿರನು ರಾಜ್ಯವನ್ನಾಳುತ್ತಿದ್ದಾಗ ಸಪ್ತರ್ಷಿ ನಕ್ಷತ್ರಗಳು ಕಾಲದಿಂದಾರಂಭವಾಗಿ ಆಂಧ್ರ, ಶಾತ ವಾಹನರ ಅಂತ್ಯ ಘಟ್ಟದ ವರೆಗಿನ ಕಾಲದಲ್ಲಾಗಿದೆ ಸಪ್ತರ್ಷಿ ನಕ್ಷತ್ರ ಸಮೂಹ 24 ನಕ್ಷತ್ರಗಳು ದಾಟಿ ಹೋದುದೆಂದು ಪುರಾಣಗಳಿಂದ ಅಂದಾಜಿಸಬಹುದಾಗಿದೆ. ಶಾತವಾಹನರ ಅಂತ್ಯಕಾಲ ಎ. ಡಿ. ಮೂರನೇ ಶತಮಾನವೆಂಬ ಚರಿತ್ರಧಾರಣೆ ಇರುವುದರಿಂದಲೂ 24 ನಕ್ಷತ್ರಗಳು ದಾಟಿ ಹೋಗಲು ಸಮಯ 2400 ವರ್ಷವೆಂಬ ಜ್ಯೋತಿಷ ವಿಧಿ ಇರುವುದರಿಂದಲೂ ಪರೀಕ್ಷಿತನ ಕಾಲ ಕ್ರಿ. ಪೂ. 2170 ಎಂದು ಲೆಕ್ಕ ಹಾಕಲು ಸಾಧ್ಯವಿದೆ.

ಯುಧಿಷ್ಠಿರನ ಅಳಿಯನ ಅಳಿಯನಾದ ಪರೀಕ್ಷಿತನ ಕಾಲ ಇದಾಗಿರುವುದಾದರೆ ಮಹಾಭಾರತ ಯುದ್ಧಕಾಲ ಕ್ರಿ. ಪೂ. 2300 ಕ್ಕೆ ಸಮೀಪವಿರಬೇಕೆಂದು ವಾದಿಸುವವರಿದ್ದಾರೆ. ಆದರೆ ನಕ್ಷತ್ರಗಳಿಗೆ ಚಲನೆ ಇಲ್ಲವೆಂಬ ವಾಸ್ತವಾಂಶವನ್ನನುಸರಿಸಿ ಈ ರೀತಿ ಲೆಕ್ಕ ಹಾಕುವುದೆಲ್ಲಾ ಬರೇ ಅರ್ಥಶೂನ್ಯವಾದ ಸಂಕಲ್ಪಗಳನ್ನು ಆಧಾರವಾಗಿರಿಸಿಕೊಂಡವುಗಳೆಂಬುದು ಬೆಳಕಿಗೆ ಬರುತ್ತಿದೆ.

ಪುರಾಣಗಳಿಂದ

ವಾಯು ಪುರಾಣ, ಮತ್ಸ್ಯ ಪುರಾಣ, ವಾಮನ ಪುರಾಣ ಮುಂತಾದ ಹಲವು ಪುರಾಣಗಳಲ್ಲೂ ಕಾಣುವ ಕೆಲವು ವಿವರಣೆಗಳನ್ನು ಆಧಾರವಾಗಿರಿಸಿಕೊಂಡು ಮಹಾಭಾರತ ಯುದ್ಧದ ಕಾಲವನ್ನು ನಿರ್ಣಯಿಸಲು ಭಾಷಾಗವೇಷಕರೂ ಚರಿತ್ರ ಪಂಡಿತರೂ ಶ್ರಮಿಸಿದ್ದಾರೆ.

ವಾಮನ ಪುರಾಣದ ಒಂದು ಪ್ರತಿಪಾದ್ಯವನ್ನನುಸರಿಸಿ ಬುದ್ಧನು ಕೋಸಲ ರಾಜ್ಯದ ಪ್ರಸೇನ ಜಿತ, ಅವಂತಿಯ ಚಂದ್ರ, ಪ್ರದ್ಯೋತನ ಎಂಬವರು ಭಾರತದ ಯುದ್ಧ ಕಳೆದು 24 ಕುಟುಂಬ ಆಳಿದ ಬಳಿಕ ಬಂದವರೆಂದು ತೋರುತ್ತದೆ.,

ಇದರಲ್ಲಿ ಬುದ್ಧನ ಕಾಲ ಕ್ರಿ. ಪೂ. 6ನೇ ಶತಮಾನವೆಂದು ಸಾಮಾನ್ಯ ಅಂಗೀಕರಿಸಲಾಗಿದೆ. ಇದನ್ನೆ ಆಧಾರವಾಗಿರಿಸಿಕೊಂಡು 24 ಕುಟುಂಬಗಳಿಗೆ ಒಟ್ಟು 8 ಶತಮಾನಗಳನ್ನು ಲೆಕ್ಕ ಹಾಕಿ ಮಹಾಭಾರತ ಯುದ್ಧಕಾಲ ಕ್ರಿ.ಪೂ 14 ನೇ ಶತಮಾನವಾಗಿರಬಹುದೆಂದೂ ಅಭಿಪ್ರಾಯ ಪಡುವವರಿದ್ದಾರೆ.

ಪರೀಕ್ಷಿತನ ಜನನದಿಂದ ನಂದರಾಜನ ಸಿಂಹಾಸನಾರೋಹಣವರೆಗಿನ ಕಾಲ 1050 ವರ್ಷಗಳಾಗಿವೆ. ನಂದನ ಸಿಂಹಾಸನಾರೋಹಣ ಕ್ರಿ. ಪೂ. 364 ನೇ ವರ್ಷದಲ್ಲಾಗಿತ್ತೆಂದು ಚರಿತ್ರಧಾರಣೆಯನ್ನವಲಂಬಿಸಿ ಕೆಲವರು ಚರಿತ್ರಕಾರರು ಲೆಕ್ಕಹಾಕಿ ಯುದ್ಧಕಾಲವು ಕ್ರಿ. ಪೂ. 14ನೇ ಶತಮಾನವೆಂಬ ನಿಶ್ಚಯಕ್ಕೆ ಬಂದರು.

ಆದರೆ ಕ್ರಿ. ಪೂ. 14 ನೇ ಶತಮಾನದಲ್ಲೆಲ್ಲಾ ಕುರುಕ್ಷೇತ್ರ, ಹಸ್ತಿನಾಪುರ ಮತ್ತಿತರ ಕಡೆಗಳಲ್ಲಿ ಮನುಷ್ಯನು ಚಿಕ್ಕ ಹರಿತವಾದ ಶಿಲಾಯುಧಗಳನ್ನೂ ತಾಮ್ರದಿಂದ ತಯಾರಿಸಿದ ಬಾಣದ ಮೊನಚಿನಿಂದಲೂ ಬೇಟೆಯಾಡುತ್ತಿದ್ದುದು ಕಂಡುಬಂದಿದೆ.

ಉತ್ತರಕ್ಕೆ ಪೇಶಾವರದಿಂದ ದಕ್ಷಿಣಕ್ಕೆ ಬ್ರೋಚಾವರೆಗೆ, ಪಶ್ಚಿಮಕ್ಕೆ ಕರಾಚಿಯಿಂದ ಪೂರ್ವಕ್ಕೆ ದೆಹಲಿವರೆಗಿರುವ ಪ್ರದೇಶಗಳಲ್ಲಿ ಹರಡಿಕೊಂಡಿದ್ದ ಸೂಕ್ಷ್ಮ ಶಿಲಾ ಸಂಸ್ಕಾರದ ಕಾಲ ಘಟ್ಟವಾಗಿತ್ತು ಅದು. ಆದುದರಿಂದ ಕ್ರಿ. ಪೂ. 14ನೇ ಶತಕವೆಂಬ ಕಾಲ ನಿರ್ಣಯ ಸ್ವೀಕೃತವಾಗಿ ಕಂಡು ಬರುವುದಿಲ್ಲ, ಮತ್ಸ್ಯಪುರಾಣದ ಒಂದು ವಿವರಣೆಯಂತೆ ಆದಿಮಾನುವಿನಿಂದ ಮಹಾಭಾರತ ಯುದ್ಧದವರೆಗೆ 94 ವಂಶ ರಾಜ್ಯವನ್ನಾಳಿದೆ. ಆದಿ ಮನುವಿನ ಕಾಲ ಕ್ರಿ.ಪೂ. 3100 ಆಗಿರಬೇಕೆಂದು ಅಭಿಪ್ರಾಯ ಪಡುವವರಿದ್ದಾರೆ. 94 ವರ್ಷಕ್ಕೆ 19 ಶತಮಾನಗಳ ಲೆಕ್ಕ ಹಾಕಿ ಮನುವಿನ ಕಾಲವನ್ನೂ ಕೂಡಿಸಿ ನೋಡಿದಾಗ ಮಹಾಭಾರತ ಯುದ್ಧಕಾಲ ಕ್ರಿ. ಪೂ. 12 ನೇ ಶತಮಾನಗಳೆಂದು ಲೆಕ್ಕ ಹಾಕಿದರು.

ವಾಮನ ಪುರಾಣದ ಇನ್ನೊಂದು ಪ್ರತಿಪಾದ್ಯವನ್ನನುಸರಿಸಿ ಯುಧಿಷ್ಠಿರನಿಂದ ಚಂದ್ರಗುಪ್ತ ಮೌರ್ಯನವರೆಗೆ 36 ವಂಶ ರಾಜ್ಯವನ್ನಾಳಿತು. ಚಂದ್ರಗುಪ್ತ ಮೌರ್ಯ ಕಾಲ ಕ್ರಿ. ಪೂ. 322 ಎಂಬ ಚರಿತ್ರಧಾರಣೆಯನ್ನು ಆಧಾರವಾಗಿರಿಸಿಕೊಂಡು 36 ವಂಶಕ್ಕೆ ಒಟ್ಟು 8 ಶತಮಾನಗಳು ಎಂದು ಸಂಕಲ್ಪಿಸಿ ಯುಧಿಷ್ಠಿರನ ಕಾಲ ಕ್ರಿ. ಪೂ 11 ನೇ ಶತಮಾನವೆಂದು ಅಭಿಪ್ರಾಯ ಪಡುವವರೂ ಇದ್ದಾರೆ.

ಅಗ್ನಿಪುರಾಣದ ಒಂದು ಅಂಕಿ ಸಂಖ್ಯೆಯನ್ನನುಸರಿಸಿ ಜನಮೇಜಯನ ಪೌತ್ರನಾದ ಅಧಿಸೀಮ ಕೃಷ್ಣನು ನಂದರಾಜನಿಗೂ ಮಧ್ಯೆ 26 ರಾಜರು ಆಳಿದ್ದರು ಎಂದು ತೋರುತ್ತದೆ, ಕೊನೆಯ ನಂದರಾಜನಾದ ಮಹಾಪದ್ಮನಂದನ ಸಿಂಹಾಸನಾರೋಹಣ ಕ್ರಿ. ಪೂ. 382 ರಲ್ಲಿ ಆಗಿತ್ತು ಎಂಬ ಚರಿತ್ರಧಾರಣೆಯನ್ನು ಆಧರಿಸಿ 26 ರಾಜರಿಗೆ 5 ಶತಕಗಳೆಂದು ಸಂಕಲ್ಪಿಸಿ ಅಧಿಸೀಮ ಕೃಷ್ಣನ ಕಾಲ ಕ್ರಿ. ಪೂ. 9 ನೇ ಶತಮಾನವೆಂದು ಲೆಕ್ಕ ಹಾಕಿದ್ದಾರೆ.

ಅಧಿಸೀಮ ಕೃಷ್ಣನ ಮತ್ತು ಯುಧಿಷ್ಠಿರನೊಳಗಿನ ಕಾಲಾಂತರ ಒಂದು ಶತಕಕ್ಕಿಂತ ಹೆಚ್ಚಾಗಿರಲಾರದೆಂಬ ವಿಶ್ವಾಸದಲ್ಲಿ ಕ್ರಿ. ಪೂ. 10 ನೇ ಶತಮಾನವಾಗಿರಬಹುದು ಮಹಾಭಾರತ ಯುದ್ಧಕಾಲವೆಂದು ಅಭಿಪ್ರಾಯ ಪಡುವವರಿದ್ದಾರೆ. ಹೀಗೆ ಒಂದಕ್ಕೊಂದು ಹೊಂದಿ ಬರದ ಕಾಲ ನಿರ್ಣಯ ವಾದಗಳಿಂದಾಗಿ ಪುರಾಣಗಳ ನಿಶ್ಚಿತ ಕಾಲವನ್ನು ನಿಶ್ಚಯಿಸುವುದಾಗಲೀ ಪುರಾಣದಲ್ಲಿ ಹೇಳಿರುವ ಘಟನೆಗಳನ್ನು ನಂಬುವುದಾಗಲೀ ಕಷ್ಟವಾಗುತ್ತದೆ.

ಕ್ರಿ. ಪೂ. 12ನೇ ಶತಮಾನದಲ್ಲಿ ಅಕ್ಷೌಹಿಣಿ ಭಾಗವಹಿಸುವ ಮಹಾಯುದ್ಧಗಳೂ ವಿಪುಲ ಸಾಮ್ರಾಜ್ಯಗಳೂ ಪುರೋಗಮಿಸಿರುವ ನಾಗರಿಕತೆಯೂ ಇದ್ದುವೆಂದು ಸಂಕಲ್ಪಿಸುವುದೂ ಕಷ್ಟವಾಗಿದೆ. ಕ್ರಿ. ಪೂ. 10ನೇ ಶತಮಾನವನ್ನು ಮಹಾಭಾರತ ಕಥಾ ಬೀಜದ ಆವಿರ್ಭಾವ ಕಾಲವಾಗಿ ಊಹಿಸಬಹುದಷ್ಟೆ. ಚಿಕ್ಕ ರಾಜ್ಯವನ್ನು ಆಳುವುದರ ವಿಷಯದಲ್ಲಿ ತಮ್ಮೊಳಗೆ ಕಲಹದಲ್ಲೇರ್ಪಟ್ಟ ಒಂದು ಕುಟುಂಬದ ಚರಿತ್ರೆ ಮಹಾಭಾರತದ ಕತೆಗೆ ಆಧಾರವಾಗಿರುವುದಾದರೆ ಲೆಕ್ಕ ಹಾಕುವವರಿದ್ದಾರೆ. ಕ್ರಿ. ಪೂ. 6ನೇ ಶತಮಾನದಲ್ಲಿ 16 ಜನಪದಗಳು ಇದ್ದುದಾಗಿ ಜೈನ ಬೌದ್ಧ ಕೃತಿಗಳು ಸಂಶಯಾತೀತವಾಗಿ ಹೇಳುತ್ತಿವೆ. ವೈದಿಕ ಸಾಹಿತ್ಯದಲ್ಲಿ: ಒಂದಾನೊಂದು ಕಾಲದಲ್ಲಿ ದೃಷದ್ವತಿಯೂ ಸರಸ್ವತಿಯೂ ಹರಿಯುತ್ತಿದ್ದ ಕುರುಕ್ಷೇತ್ರ ಭೂಮಿಯಲ್ಲಿ ಆರ್ಯಸಂಸ್ಕಾರದ ಬೆಳಕು ಚೆಲ್ಲಿದ ಕುರುವಂಶಜರ ಯಾಗಾಗ್ನಿ ಕುಂಡಗಳನ್ನೂ ಶುದ್ಧವಾದ ವೇದಮಂತ್ರ ಧ್ವನಿಗಳನ್ನು ಓದಿಸ ವೈದಿಕ ಸಾಹಿತ್ಯಗಳೂ ಹಿಂದಿನ ಸಂಕಲ್ಪ ಗ್ರಂಥಗಳೂ ವಿಮರ್ಶಿಸುತ್ತವೆ. ಯಜುರ್ವೇದದ ಕಾಠಕ ಸಂಹಿತೆಯಲ್ಲಿ ವಿಚಿತ್ರ ವೀರ್ಯನ ಪುತ್ರನೂ

(ಮೂರನೆ ಪುಟಕ್ಕೆ)

ಇದು ಮಹಾಭಾರತ ಕಾಲದವುಗಳಾಗಿರಲು ಸಾಧ್ಯವೆ? ಪಾಂಡವ ನಗರವಾದ ಹಸ್ತಿನಾಪುರದಿಂದ ಸಿಕ್ಕಿದ ವಿಗ್ರಹ

"ಬಂದರೋ ಬಂದರು..."

ಬಂದರಲ್ಲ ಬಂದರು
ನಮ್ಮ ಲಂಕೇಶರು!
ಜಾಣೆಯರ ಕಂಡರು
ಬೆಂಗುಲಾಬಿ ತಂದರು
ಜಾಣರನ್ನು ಕಂಡರು
ಟೀಕೆ ಟಿಪ್ಪಣಿ ಬರೆದರು
ನೀಲುವನ್ನು ಕಂಡರು
ಬಂದು ಅಪ್ಪಿಕೊಂಡರು
ಬಂದರೋ ಬಂದರು
ನಮ್ಮ ಲಂಕೇಶರು...

'ಫಂಟಾಘೋಷ' ಪತ್ರಿಕೆಯ ಪತ್ರಕರ್ತ ಯಂಕ್ಟನ ಕಿವಿಗಳೆರಡೂ ಬಿಸಿದು 'ವಾಯುಸೇತ' ವಿಮಾನದ ಬಾಗಿಲುಗಳು ಕಳಚಿ ಬಿದ್ದಂತೆ ಬೀಳುವ ಸ್ಥಿತಿಯಲ್ಲಿದ್ದವು. ಮುರಿದ ತಂಬೂ ಇಳಿಯುತ್ತಿದ್ದ ಬೆವರನ್ನು 'ಪ್ರಗತಿರಂಗ'ದ ಧ್ವಜದಲ್ಲೇ ಒಂಸಿಕೊಳ್ಳುತ್ತ 'ಪ್ರಗತಿರಂಗ'ದ ಜಾಡನ್ನು ಕಿರುಚುತ್ತಿದ್ದ ವ್ಯಕಾದಡಿಗೆ ಸಿಟ್ಟಿನಿಂದ ಪ್ಯಾಕೆಟ್ಟನ್ನ ಸಂತೆ ನೋಡಿದ.

ಆದರೆ ಪ್ರಯೋಜನವಾಗಲಿಲ್ಲ. ವ್ಯಕಾ ಅರಚುತ್ತಲೇ ಇತ್ತು.

ಯಂಕ್ಟನ ಎದುರಿಗೆ ಕುಳಿತಿದ್ದ ಪ್ರಗತಿರಂಗದ ಘಟಾನುಘಟಿ ಮುಂದಾಳುಗಳಿಗೆ ಮಾತ್ರ ಈ ವ್ಯಕಾದ ಅಬ್ಬರ ಏನೇನೂ ತಾಗಿದಂತೆ ಕಾಣಿಸಲಿಲ್ಲ. ಅವರೆಲ್ಲರೂ ಅಂತ ಮವಾಗಿ ಚರ್ಚಿಸುತ್ತಿದ್ದರು.

"ಅದೂ... ಜಾಣೆಯರ ಸಂಖ್ಯೆ ಬಹಳ ಕಡಿಮೆ.ಯಾಯ್ತು ಮೇಷ್ಟ್ರೇ. ನಮ್ಮ ರ‍್ಯಾಲಿಯಲ್ಲಿ ಕರ್ನಾಟಕದ ಮೂಲೆಮೂಲೆಗಳಿಂದ ಕನಿಷ್ಠ 10ಸಾವಿರ ಜಾಣೆಯರಾದರೂ ಬರಬಹುದು ಎಂದುಕೊಂಡಿದ್ದೆ..."- ವಿರಹ ವೇದನೆಯಿಂದ ನರಳುತ್ತಿದ್ದ ನ- ಗತಿ (ಗತಿಯಿಲ್ಲದ) ಹಳ್ಳದ ಮುಂದಾಳು ಬಿಕ್ಕಿ ಬಿಕ್ಕಿ ಅಳುತ್ತಾ ಹೇಳಿದ.

ನ- ಗತಿಹಳ್ಳದ ಮುಂದಾಳು ಬಿಕ್ಕಲು ಶುರುಮಾಡಿದಂತೆಯೇ ಕಾಲಿಮಿಷ್ಟ ಸವಾಕಿನಿ ಸಿಟ್ಟಿಗೆದ್ದಳು.- "ಯಾಕ್ರೀ ಕಾಂಗ್ರೆಸ್ಸಿನವರಂತೆ ಅಳ್ತೀರಾ...? ಜಾಣೆಯರ ಸಂಖ್ಯೆ ಇಷ್ಟೇ ಸಾಕು. ಜಾಣರು ಇನ್ನೊಂದಷ್ಟು ಮುಂದೆ ಬರಬೇಕಿತ್ತು. ಅಲ್ವಾ ಸಾರ್...?"- ಎಂದು ಓರೆಗಣ್ಣಿನಿಂದ ಮೇಷ್ಟರ ಕಡೆಗೆ ನೋಡಿದ್ದಳು.

ಮೇಷ್ಟರ ಕಣ್ಣು ಆದಾಗಲೇ ರಂಗೇರತೊಡಗಿತ್ತು. ಸಿಗರೇಟು ಹೊಗೆಯಾಡು ತ್ತಿತ್ತು. ಕಣ್ಣನಲ್ಲೇ ಕನಸು ಕಟ್ಟುತ್ತಾ ಏಕಾಂಗಿಯಂತೆ ಚಿಂತಿಸುತ್ತಾ ಮೇಷ್ಟರು ಬಾಯಿ ತೆರೆದರು. ಯಂಕ್ಟ ತಕ್ಷಣ ಪೆನ್ನು ತೆಗೆದು ನೋಟ್ ಮಾಡಿಕೊಳ್ಳತೊಡಗಿದ.- "ಇದು ಜಾಣರ ಜಾಣೆಯರ ಸಂಖ್ಯೆಯ ಪ್ರಶ್ನೆ ಅಲ್ಲ, ಆತ್ಮದ ಪ್ರಶ್ನೆ. ಆತ್ಮ ಶುದ್ಧವಿರಬೇಕಾಗು ತ್ತದೆ. ಜತೆಗೆ ಸಾವಿರಾರು ಜಾಣ-ಜಾಣೆಯರಿಗೆ ಬೆಂಗಳೂರಿಗೆ ನಮ್ಮ ರ‍್ಯಾಲಿಗೆ ಬರಲು ಸಾಧ್ಯವಾಗಿಲ್ಲ. ಅವರ ಬಳಿ ಹಣ ಇಲ್ಲ. ಬಡತನ. ಆದರೆ ನಮ್ಮ ಜಾಣ-ಜಾಣೆಯರು ಮನಸ್ಸಿನ ದಾರಿದ್ರ್ಯ ಹೋದಿಲ್ಲ. ಮಾನಸಿಕವಾಗಿ ಅವರು ಶ್ರೀಮಂತರು. ನನ್ನ ಮನೆ ಯೆದುರು ಕೇವಲ ನಾಲ್ಕು ವರ್ಷಗಳಲ್ಲಿ ಅದ್ಭುತವಾಗಿ ಬೆಳೆದ ಬೂರುಗ, ಸ್ಪಥೋಡಿಯಾ, ಬೇವಿನ ಮರಗಳಿವೆ. ಬೂರುಗ ಮೊನ್ನೆ ತಾನೆ ಚಿಗುರಿ ಈಗ ಹಚ್ಚ ಹಸಿರಾಗಿ ತಣ್ಣನೆಯ ನೆರಳು ಕೊಡುತ್ತಿದೆ, ಮಧ್ಯಾಹ್ನ ಸುತ್ತಣ ಮನೆಗಳಿಂದ ಬಂದು ಸೇರುವ ಜನ ಒಮ್ಮೆ ನಾನು ಬಂದಾಗ ಎದ್ದು ನಿಂತರು. ನಾನು ಹೇಳಿದೆ- ಪರವಾಗಿಲ್ಲ ಕುಳಿತುಕೊಳ್ಳಿ. ಅವರು ಕುಳಿತರು...."

ಮೇಷ್ಟರ ಮಾತು, ಮರ, ಗುಲಾಬಿತೋಟದೆಡೆತೆ ಹರಿಯುತ್ತಿರುವುದನ್ನು ಗ್ರಹಿಸಿದ ಯಂಕ್ಟನಿಗೆ ನಿರಾಸೆಯಾಯಿತು. ಮೇಷ್ಟ್ರ ಇತ್ತೀಚೆಗೆ ಕಟ್ಟಿದ ಹೊಸ ರಾಜಕೀಯ ಪಕ್ಷ ಪ್ರಗತಿರಂಗದ ಚುನಾವಣಾ ಸಿದ್ಧತೆ ಬಗ್ಗೆ ವಿವರ ಪಡೆದುಕೊಳ್ಳಲು ಸಂಪಾದಕರು ಆತನನ್ನು ಕಳಿಸಿದ್ದರು. ಆದರೆ ಇಲ್ಲಿ ಚುನಾವಣೆ ವಿಷಯ ಬಿಟ್ಟು ಬೂರುಗದ ಮರ, ಆತ್ಮ, ತಣ್ಣನೆ ನೆರಳು- ಹೀಗೆ ವಿಷಯ ಬೆಳೆಯುತ್ತಿದೆ. ಯಂಕ್ಟನ ತಲೆ ಬಿಸಿಯಾಯಿತು. ತಡೆಯಲಾಗದೆ ನಡುವೆ ನುಗ್ಗಿ ಗಟ್ಟಿಯಾಗಿಯೇ ಕೇಳಿದ- "ಅಲ್ಲಾ ಸಾ.... ಚುನಾವಣೆ.... ಚುನಾವಣೆ... ಪ್ರಗತಿರಂಗ, ಸೀಟು ಹೊಂದಾಣಿಕೆ...."

ಮೇಷ್ಟ್ರ ಹಿಂದೆಯೇ ನಿಂತಿದ್ದ ಪ್ರಸಿದ್ಧಪ್ಪ ಮತ್ತು ರವೀಂದ್ರ ಸೆಣಬು ಎದ್ದು ನಿಂತು ಯಂಕ್ಟನ ಹಿಂಬದಿಯ ಕಾಲರಿಗೆ ಕೈಹಾಕಿ ಥಕ್ಕನೇ ಕುಳ್ಳಿರಿಸಿದರು.

ಮೇಷ್ಟ್ರ ಕಣ್ಣುಮುಚ್ಚಿದ್ದರು. ಅವರಿಗೆ ಇದ್ಯಾವುದೂ ಕಂಡಿರಲಿಲ್ಲ. ಅವರು ಮತ್ತೆ ಮಾತು ಮುಂದುವರಿಸಲು ಬಾಯಿ ತೆಗೆದರು.

ಯಂಕ್ಟನಿಗೆ ಒಂದುಕಡೆ ಸಮಯ ಮೀರುತ್ತಿತ್ತು. ಇನ್ನೊಂದೆಡೆ ಸಂಪಾದಕರ ಭೀತಿ ಕಾಡುತ್ತಿತ್ತು. ಇಷ್ಟುದೂರ ಬಂದು ಪ್ರಗತಿರಂಗದ ಬಗ್ಗೆ, ಚುನಾವಣಾ ಹೊಂದಾಣಿಕೆ ಬಗ್ಗೆ ರೈತ ಸಂಘದ ಜತೆಗಿನ ಪ್ರಗತಿರಂಗದ ಭಿನ್ನಾಭಿಪ್ರಾಯದ ಬಗ್ಗೆ ಏನೂ ಕೇಳದಿದ್ದರೆ ಹೇಗೆ...? ಮತ್ತೆ ಎದ್ದು ನಿಂತು ಗಟ್ಟಿಯಾಗಿ ಕಿರುಚಿದ- "ಸಾರ್,... ನಂಜುಂಡಸ್ವಾಮಿ..." - ಹಿಂದಿನಿಂದ ಮೇಲೆದ್ದ ಪ್ರಗತಿರಂಗದ ಕ್ರಾಂತಿಕಾರಿ ಮುಂದಾಳು ವಜೀರ್ ರಪಕ್ಕನೆ ಯಂಕ್ಟನ ಬಾಯಿ ಒತ್ತಿ ಹಿಡಿದ.



ಆದರೆ ಮೇಷ್ಟರಿಗೆ ಯಂಕ್ಟನ ಸ್ವರ ಕೇಳಿಸಿತ್ತು. ಅವರು ಸಿಟ್ಟಿನಿಂದ ಕೇಳಿದರು- "ಯಾರಾತ? ನಂಜುಂಡಸ್ವಾಮಿ ಯಾರು?"

ಯಂಕ್ಟನಿಗೆ ಖುಷಿಯಾಯಿತು. ವಜೀರ್‌ನ ಬಿಗಿಮುಷ್ಟಿ ಸಡಿಲಿಸಿ ಮತ್ತೆ ಎದ್ದು ನಿಂತ- "ಅದೇ ಸಾರ್ ರೈತ ಸಂಘದ ಮುಂದಾಳು ನಂಜುಂಡಸ್ವಾಮಿ.. "

"ರೈತ ಸಂಘ ರೈತರ ಸಂಘ ಕಣ್ರೀ.. ಅದಕ್ಕೆ ಮುಂದಾಳುಗಳಿಲ್ಲ. ಅದೊಂದು ಸಮೂಹ ಚಳವಳಿ. ಈ ನಂಜುಂಡ ಸ್ವಾಮಿಯನ್ನು ಲೀಡರ್ ಅಂದೋನು ಯಾರು...?"-ಮೇಷ್ಟ್ರ ಧ್ವನಿ ಸಿಟ್ಟಿನಿಂದ ಕಂಪಿಸ ತೊಡಗಿತ್ತು.

ಯಂಕ್ಟ ಮೆತ್ತಗಾದ. 'ಅಲ್ಲಾ ಸಾರ್'.. ನೀವು ರೈತ ಸಂಘದ ಜತೆ ಚುನಾವಣೆಯಲ್ಲಿ ಸೀಟು ಹೊಂದಾಣಿಕೆ ಪಡೆಸುವ ಅಭಿಪ್ರಾಯ ಇದೆಯಲ್ಲ.."-ಎಂದು ಮೆಲ್ಲಗೆ ಕೇಳಿದ.

"ನಮಗೆ ಸೀಟಿನ ಮೋಹ ಇಲ್ಲ. ಆದ್ದರಿಂದ ಸೀಟು ಹೊಂದಾಣಿಕೆ ಇಲ್ಲ"- ಮೇಷ್ಟರು ನಿಷ್ಠುರವಾಗಿ ಅಂದರು.

"ನೀವು ಕೇವಲ 170 ಸೀಟುಗಳಿಗೆ ಮಾತ್ರ ಸ್ಪರ್ಧಿಸುತ್ತೀರಿ ಅಂತ ಹೇಳಿದ್ದಿರಿ. ಅದ್ಯಾಕೆ 224 ಸೀಟುಗಳಿಗೂ ಯಾಕೆ ಸ್ಪರ್ಧಿಸುತ್ತಿಲ್ಲ?"

"ನಮ್ಮಲ್ಲಿ ಅಷ್ಟು ಸಂಖ್ಯೆಯ ಅಭ್ಯರ್ಥಿಗಳಿಲ್ಲ. ನಮ್ಮದು ಪುಟ್ಟ ಪತ್ರಿಕೆ. ಒಟ್ಟು 28 ಕಂಪೋಸಿಟರು; 25 ಸಂಪಾದಕೀಯ ಬಳಗದ ಸದಸ್ಯರು, 26 ಮಂದಿ ಪತ್ರಿಕೆ ಪ್ಯಾಕಿಂಗ್ ಮಾಡುವವರು ಜತೆಗೆ ಹಲವು ಸಾಹಿತಿ ಬಳಗದವರಿಗೆ ಒಟ್ಟು ಸೇರಿಸಿದರೆ ಹೆಚ್ಚೆಂದರೆ 150 ರಿಂದ 170 ಜನ ಆಗಬಹುದು. ಆದ್ದರಿಂದ ಅಷ್ಟು ಸೀಟುಗಳಿಗೆ ಮಾತ್ರ ಸ್ಪರ್ಧೆ ಮಾಡಬೇಕಾಗುತ್ತದೆ."

"ಹಣಕ್ಕೇನು ಮಾಡ್ತೀರಿ ಸಾರ್..."

"ಹಣ!"- ಮೇಷ್ಟರು ವ್ಯಂಗ್ಯವಾಗಿ ಮುಗುಳ್ನಕ್ಕು ಯಂಕ್ಟನೆಡೆಗೊಮ್ಮೆ ನೋಡಿದರು. "ನಾವು ಹಣವಿಲ್ಲದೆ ರಾಜಕೀಯ ಮಾಡುವವರು. ನಮಗೆ ಜನರೇ ಹಣ ಕೊಡುತ್ತಾರೆ. ಮೊನ್ನೆ ನೋಡಿ-ಒಬ್ಬ ರಿಕ್ಷಾ ಡ್ರೈವರ್ ಬಂದು ಪೆಟ್ರೋಲ್ ಹಾಕಿ ಸಾರ್, ಬಾಡಿಗೆ ಬೇಡ ಅಂದ. ಇನ್ನೊಬ್ಬ ಪ್ಯಾಕಾ ಹಾಕ್ತೀವಿ ಹಣ ಬೇಡ ಅಂದ. ನಮಗೆ ಬಾವುಟ ಹೊಲಿದ ದರ್ಜಿ ಹಣ ತಗೊಳ್ಳಲು ಕೇಳಲೇ ಇಲ್ಲ.. ಕರ್ನಾಟಕದ ಮೂಲೆ ಮೂಲೆಗಳಲ್ಲಿ ನಮ್ಮನ್ನು ಜನರೇ ಮುತ್ತಿ ಹಣ ಕೊಡುತ್ತಾರೆ. ಎಷ್ಟು ಹೇಳಿದರೂ ಹಣ ತೆಗೆದುಕೊಳ್ಳುವುದಿಲ್ಲ. ಇದು ನಿಜವಾದ ಪ್ರೀತಿ.. ಪ್ರೀತಿಯಿಂದ ರಾಜಕೀಯ ಕಟ್ಟಬೇಕು... ಬಾಪೂಜಿ ಕಲಿಸಿದ ಪಾಠ ಅದು.."

"ಬಾಪೂಜಿಗೂ ಹೀಗೆಯೇ ಬಿರ್ಲಾ ಮುಂತಾದ ಜನ ಪ್ರೀತಿಯಿಂದ ಹಣ ಕೊಡುತ್ತಿದ್ದರಂತಲ್ಲ.. ಸಾ..."

ವಜೀರ್ ಮುಷ್ಟಿ ಬಿಗಿ ಹಿಡಿದು ಮತ್ತೆ ಮೇಲೆದ್ದಾಗ ಜುಬ್ಬಾ ಸರಿಪಡಿಸುತ್ತಾ ಗ್ರಾಮದಾಸ್ ತಡೆದರು-'ನೋಡಿ ಯಂಕ್ಟ ಅವರೇ, ನೀವು ಪರಂಪರಾಗತ ಮೌಲ್ಯ ಪ್ರತಿಪಾದಕ ಪತ್ರಕರ್ತರು. ನಿಮಗೆ ನಮ್ಮ ಹೊಸ ರಾಜಕಾರಣ ಅರ್ಥ ಆಗೋದಿಲ್ಲ ನಮ್ಮದು ಗ್ರಾಮ ರಾಜಕಾರಣ. ಸ್ವಾತಂತ್ರ್ಯ ಸಿಕ್ಕಿ 4 ದಶಕಗಳ ಬೆನ್ನೆಲುಬಿಲ್ಲದ ರಾಜಕಾರಣದಲ್ಲಿ ನಮ್ಮ ಜನ ನೆಲಕಚ್ಚಿದ್ದಾರೆ. ನಿರ್ವೀರ್ಯರಾಗಿದ್ದಾರೆ. ಈಗ ಮುಖ ಹೇಡಿ ಪುಡಾರಿಗಳ ಮುಖವಾಡಗಳನ್ನು ಕಿತ್ತೊಗೆದು ಹೊಸಗಾಳಿ, ನೀರು ಹೊಸ ಹುಟ್ಟುಗಳ ಪಡೆದು ಸ್ವಚ್ಛ ರಾಜಕಾರಣವನ್ನು ಮರಳಿ ತರ..."

–ಗ್ರಾಮದಾಸರಂತೆಯೇ ಯಂಕ್ಟನ ಮುಖದಲ್ಲೂ ಧಾರಾಕಾರ ಬೆವರಿಳಿಯುತ್ತಿತ್ತು. ಪಕ್ಕದಲ್ಲಿ ಕುಳಿತು ಇವರನ್ನೆಲ್ಲಾ ನಿಗೂಢ ಮನುಷ್ಯರೆಂಬಂತೆ ನೋಡುತ್ತಿದ್ದ ಅರ್ಧಚಂದ್ರ ರಾಜಸ್ವಿ ಕಿರುಚಿದರು-'ಶ್ರೀ ಗ್ರಾಮದಾಸ್'. ಇದೇನು ಚುನಾವಣಾ ಪ್ರಚಾರ ಸಭೆ ಅಂದ್ಕೊಂಡ್ರಾ.. ಸುತ್ಕೊಳ್ಳಿ ಹೋಗಿ ಜ್ಯೂಸ್ ಅಂಗಡೀಲಿ ಲಿಂಬೆ ಹಣ್ಣಿನ ಶರಬತ್ತು ಕುಡ್ಕೊಂಡು ಬನ್ನಿ..."

ಕೊನೆಯ ಎರಡು ಶಬ್ದಗಳನ್ನು ಕೇಳಿದಾಗ ಯಂಕ್ಟನಿಗೂ ರೋಮಾಂಚನವಾಯಿತು. ಮೆಲ್ಲನೆ ಕೇಳಲೊ.. ಬೇಡವೊ ಎಂದು ಗಂಟಲು ಸರಿಪಡಿಸುತ್ತಾ.. ಸಾ...ರ್' ಎಂದ.

'ಏನ್ರೀ' ಎಂದರು ಮೇಷ್ಟರು.

'ಅದೂ .. ಮತ್ತೆ .. ಸಾರ್ .. ಇದೂ .."

"ಬೊಗಳ್ರೀ..."

"ಅದೇ ಸಾರ್..."–ಯಂಕ್ಟ ನಿಧಾನವಾಗಿ ಎದ್ದು ಬಾಗಿಲ ಕಡೆಗೆ ಸರಿಯುತ್ತಾ ಕೇಳಿದ. "ನೀವು ಅಧಿಕಾರಕ್ಕೆ ಬಂದರೆ ಪಾನನಿರೋಧ ಜಾರಿಗೆ ತರ್‍ತೀರಂತಲ್ಲ.. ಯಾರಿಗೆ ಅಂತ .. ?"

ಮೇಷ್ಟ್ರ ಸುತ್ತ ಇದ್ದ ವಜೀರ್, ಸೆಣಬು, ಹಾಳೂರು, ನ-ಗತಿ ಹಳ್ಳ, ಪ್ರಸಿದ್ಧಪ್ಪ ಎಲ್ಲರೂ ತೋಳೇರಿಸಿ ಎದ್ದು ನಿಂತಾಗ ಬಾಗಿಲಿಂದ ಹೊರಗೆ ಹಾರಿದ ಯಂಕ್ಟ 'ಫಂಟಾಘೋಷ' ಕಚೇರಿಯತ್ತ ಓಟಕಿತ್ತ.

—ಬಿ. ಎಂ. ಹನೀಫ್

(ಎರಡನೆ ಪುಟದಿಂದ)

ಮಹಾಭಾರತದ ಶಾಂತ ಗಂಭೀರರಾದ ಕಥಾ ಪಾತ್ರವೂ ಆದ ಧೃತರಾಷ್ಟ್ರನನ್ನು ಕುರಿತು ಆರಂಭ ವಿವರಿಸಲಾಗಿದೆ

ಹಾಗೆಯೇ ದೇವಕಿ ಪುತ್ರ ಶ್ರೀಕೃಷ್ಣನನ್ನು ಛಾಂದೋಗ್ಯೋಪನಿಷತ್ತಿನಲ್ಲಿ ಯುಧಿಷ್ಠಿರನ ಅರ್ಜುನ ಅಳಿಯನಾದ ಪರೀಕ್ಷಿತನನ್ನು ಅಥರ್ವವೇದದಲ್ಲಿ ಮಹಾಭಾರತಾಚಾರ್ಯರನ್ನು ಅಶ್ವಲಾಯನ ಗೃಹಸೂತ್ರದಲ್ಲಿ ನಿರುಮಂಶವರನ್ನು ಶಾಂಖಾಯನ ಶ್ರೌತ ಸೂತ್ರದಲ್ಲಿ. ವಿದೂರ ಯುಧಿಷ್ಠಿರ ಎಂಬ ಪದಗಳನ್ನು ಪಾಣಿನಿ ತನ್ನ ಅಷ್ಟಾಧ್ಯಾಯಿ ಸೂತ್ರಗಳಲ್ಲಿ. ಪತಂಜಲಿ ತನ್ನ ಮಹಾಭಾಷ್ಯದಲ್ಲಿ ಭೀಮನನ್ನೂ ನಕುಲ-ಸಹದೇವನನ್ನೂ ಸ್ಮರಿಸಿದ್ದಾರೆ.

ಕ್ರಿ. ಪೂ. 14ನೇ ಶತಮಾನದ್ದೆಂದೂ ವಿಂಕ್ಲರ್‌ಮ್ಯನರ್‌ನಿಂದ ಕಂಡು ಹಿಡಿದುದೆಂದೂ ನಂಬಲಾಗಿರುವ ಬೋಗಸಾಕೋಯ ಶಾಸನದಲ್ಲಿ ಇಂದ್ರ, ವರುಣ, ನಾಸತ್ಯ, ಮಿತ್ರ ಎಂಬೀ ವೈದಿಕದೇವತೆಗಳನ್ನು ಕುರಿತು ವಿವರಿಸಲಾಗಿದೆ. ಈ ಋಗ್ವೇದ ದೇವತೆಗಳನ್ನು ಆರಾಧಿಸುವ ವೈದಿಕರು ವಾಣಿಜ್ಯ ಮೂಲಕವೂ ವಿವಾಹಬಂಧಗಳ ಮೂಲಕವೂ ವಿಶ್ವಾ ಮ್ಯನರ್‌ನೊಂದಿಗೆ ಸಂಬಂಧವಿರಿಸಿದ್ದುದರ ಸಾಕ್ಷಿಯಾಗಿದೆ ಈ ಶಾಸನ ಎಂದು

ಕುರುಕ್ಷೇತ್ರ ಯುದ್ಧ

ಅಭಿಪ್ರಾಯಪಡುವವರಿದ್ದಾರೆ. ಆದ್ದರಿಂದ ಋಗ್ವೇದ ಕಾಲವು ಕ್ರಿ. ಪೂ. 20ನೇ ಶತಮಾನದ ಮತ್ತು 14ನೇ ಶತಮಾನದ ಮಧ್ಯೆ ಆಗಿರಬೇಕೆಂದು ನಂಬಲಾಗಿದೆ.

ವಿಶ್ವಾ ಮ್ಯನರ್‌ನ ಇಂದ್ರನೂ ವರುಣನೂ ಭಾರತದಿಂದ ಹೋದವರೆ ? ಆರ್ಯ ಭಾಷೆಯನ್ನು ಮಾತನಾಡುತ್ತಿದ್ದವರು ಇಂಡೊ-ಯುರೋಪಿಯನ್, ಇಂಡೋ-ಇರಾನಿಯನ್ ದೇಶಗಳಿಂದ ಈ ಕಡೆಗೆ ಬಂದವರಾಗಿರಲು ಸಾಧ್ಯವಿಲ್ಲವೆ ?

ಈವರೆಗೆ ನಡೆದಿರುವ ಪುರಾತತ್ವ ಶೋಧನಗಳಿಂದ, ಆಧುನಿಕ ಪುರಾವಸ್ತು ವಿಜ್ಞಾನದಿಂದ ತಿಳಿದುಬರುವುದೇನೆಂದರೆ ಋಗ್ವೇದ ಕಾಲಘಟ್ಟವು ಕ್ರಿ. ಪೂ. 1ನೇ ಶತಮಾನದ ಹಿಂದಿನದಾಗಿರಲು ಸಾಧ್ಯವಿಲ್ಲವೆಂದು;ಹಾಗಾಗುವಾಗ ಹಿಂದಿನ ವೈದಿಕ ಕಾಲವು 10ನೇ ಶತಮಾನಕ್ಕೆ ಸರಿಯುತ್ತದೆ.

ಗವೇಷಣೆಯ ಫಲ: ಉಪನಿಷತ್ತು, ವೈದಿಕ ಸಾಹಿತಿಗಳೂ, ಮಹಾಭಾರತ ಕಥಾ ಪಾತ್ರಗಳನ್ನೂ ವೀರಪುರುಷರಾಗಿ ಲೆಕ್ಕ ಹಾಕುತ್ತಿರುವುದರಿಂದ ಅವರು ಜೀವಿಸಿದ್ದ ಕಾಲ ವೈದಿಕ ಸಾಹಿತ್ಯಗಳಿಗಿಂತ ಬಹಳ ಹಿಂದೆಯೇ ಆಗಿರಲು ಸಾಧ್ಯವಿಲ್ಲ. ಆದರೆ ಕ್ರಿ.ಪೂ. 6ನೇ ಶತಮಾನದಲ್ಲಿ ಜೀವಿಸಿದ್ದ ಪಾಣಿನಿಯ ಕಾಲದಲ್ಲೂ ವಾಸುದೇವನೂ ವಿಜಯನೂ ಆರಾಧ್ಯಮೂರ್ತಿಗಳಾಗಿದ್ದುದರಿಂದ ಅದರ ಮೂರು ಅಥವಾ ನಾಲ್ಕು ಶತಮಾನಗಳಿಗೆ ಹಿಂದೆ ಅವರು ಬದುಕಿದ್ದರು ಎಂದು ಅಂದಾಜಿಸಬಹುದಾಗಿದೆ.

ಕ್ರಿ.ಪೂ, 2ನೇ ಶತಮಾನದ ವೇಳೆ ಬದುಕಿದ್ದ ಪತಂಜಲಿಯ ಕಾಲದಲ್ಲಿ ಶ್ರೀಕೃಷ್ಣನನ್ನು ಭಗವಾನನ ಅವತಾರವಾಗಿ ಕಾಣಲಾಗಿತ್ತು. ಅವತಾರಕತೆ ವಿಪುಲವಾಗುವುದರೊಂದಿಗೆ ಮತದ ವಿಶ್ವಾಸ ವರ್ಧಿಸಿದುದೂ ಪತಂಜಲಿಯ ಕಾಲದಲ್ಲಾಗಿದೆ.

ಮಹಾಭಾರತ ಕಥೆ ಮತ್ತು ಅದರಲ್ಲಿ

(ಏಳನೆ ಪುಟಕ್ಕೆ)

ಉತ್ತಮ ಚಿತ್ರಗಳ ನಿರ್ಮಾಪಕ

ತಮಿಳು ಚಿತ್ರರಂಗದಲ್ಲಿ ದಾಖಲೆ ಮಾಡಿ ಹಲವಾರು ಪ್ರಶಸ್ತಿಗಳನ್ನು ಪಡೆದ "ಮೌನರಾಗಂ" "ಅಗ್ನಿನಕ್ಷತ್ರಂ" "ನಾಯಗನ್" ಮೊದಲಾದ ಸದಭಿರುಚಿಯ ಚಿತ್ರಗಳನ್ನು ತಯಾರಿಸಿದ ನಿರ್ಮಾಪಕರೇ ಜಿ. ವೆಂಕಟೇಶ್ವರನ್ ಅಕ್ಷರಿಯಿಂದ 'ಜಿವಿ' ಎಂದು ಕರೆಸಲ್ಪಡುವ ಇವರು ಇಂದು ತಮಿಳು ಚಿತ್ರರಂಗದಲ್ಲಿ ಜನಪ್ರಿಯ ನಿರ್ಮಾಪಕರಾಗಿ ಹೆಸರು ಮಾಡುತ್ತಿದ್ದಾರೆ.

ಹಂಚಿಕೆದಾರನಾಗಿ ಚಿತ್ರರಂಗಕ್ಕೆ ಕಾಲಿಟ್ಟ ಜಿವಿ ಅವರು ಯಶಸ್ವಿ ಹಂಚಿಕೆದಾರನೆಂಬ ಕೀರ್ತಿಗೆ ಪಾತ್ರರಾಗಿದ್ದರು. 86ರಲ್ಲಿ ತಯಾರಾದ ಇವರ ಮೊದಲ ಚಿತ್ರ 'ಮೌನರಾಗಂ' ಒಂದು ಉತ್ತಮ ಚಿತ್ರವಲ್ಲದೆ ಹಲವಾರು ಪ್ರಶಸ್ತಿಗಳನ್ನೂ ಗಿಟ್ಟಿಸಿತು. ರಾಷ್ಟ್ರಪ್ರಶಸ್ತಿ, ಫಿಲ್ಮ್‌ಫೇರ್ ಪ್ರಶಸ್ತಿ, ಚಲನಚಿತ್ರ ಪ್ರೇಮಿಗಳ ಸಂಘದ ಪ್ರಶಸ್ತಿ ಪಡೆಯಿತಲ್ಲದೆ, ಆ ವರ್ಷದ ಪನೋರಮಾ ಚಿತ್ರೋತ್ಸವದಲ್ಲಿ ಪ್ರದರ್ಶಿಸಲ್ಪಟ್ಟಿತು.

ನಂತರ ಇವರು ತಯಾರಿಸಿದ "ಅಗ್ನಿನಕ್ಷತ್ರಂ" ಚಿತ್ರಕೂಡಾ ಅಪಾರ ಮೆಚ್ಚುಗೆ ಪಡೆಯಿತು. ಇವರಿಗೆ ಅಪಾರ ಜನಪ್ರಿಯತೆ ಮತ್ತು ಹಣ ತಂದು ಕೊಟ್ಟ ಕಳೆದ ವರ್ಷದ 'ನಾಯಗನ್' ಚಿತ್ರ ಕೂಡಾ ಕೆಲವು ಪ್ರಶಸ್ತಿಗಳನ್ನು ಪಡೆಯಿತಲ್ಲದೆ, 'ಆಸ್ಕರ್ ಪ್ರಶಸ್ತಿ'ಯ ಸ್ಪರ್ಧೆಯಲ್ಲೂ ಭಾಗವಹಿಸಿತು. ರಾಷ್ಟ್ರ ಪ್ರಶಸ್ತಿ ಪಡೆದ ಈ ಚಿತ್ರದಿಂದ ನಿರ್ಮಾಪಕರಾದ ಜಿ.ವಿ. ಅವರ ಜನಪ್ರಿಯತೆ ಮತ್ತು ಹೆಚ್ಚಿತು.

ಇದೀಗ 'ಅಂಜಲಿ' ಚಿತ್ರವನ್ನು ತಯಾರಿಸುತ್ತಿರುವ ಜಿ.ವಿ. ಅವರ ಎಲ್ಲಾ ಚಿತ್ರಗಳ ನಿರ್ದೇಶಕರು ಒಬ್ಬರೇ. ಅವರ ಸಹೋದರನಾದ ಮಣಿರತ್ನಂ ಎಂಬ ಪ್ರತಿಭಾವಂತ ನಿರ್ದೇಶಕ ಜಿ.ವಿ.ಅವರ ಚಿತ್ರಗಳ ಯಶಸ್ಸಿನ ಪ್ರಧಾನ ಸೂತ್ರಧಾರನಾಗಿದ್ದಾರೆ.



ಉತ್ತಮ ಚಿತ್ರಗಳನ್ನು ತಯಾರಿಸುವ ಇವರ ಸದಭಿರುಚಿಗೆ ಶುಭ ಹಾರೈಕೆಗಳು.

...ಶಿ. ಪ್ರ. ಬದಿಯಡ್ಕ

'ಪ್ರಚಂಡ ಸ್ನೇಹಿತ'ರಿಗೆ ಐದು ಹಾಡು

'ವಿಘ್ನೇಶ್ವರ ಫಿಲಂಸ್' ಲಾಂಛನದಲ್ಲಿ ಡಿ. ಮುನಿಮೋಹನ್ ನಿರ್ಮಿಸಲಿರುವ 'ಪ್ರಚಂಡ ಸ್ನೇಹಿತರು' ಪ್ರಣಯಭರಿತ, ಸಾಂಸಾರಿಕ ವರ್ಣ ಚಿತ್ರಕ್ಕಾಗಿ ಡೆಕ್ಕನ್ ಸ್ಟುಡಿಯೋದಲ್ಲಿ ಪ್ರಾರ್ಥ್ಯಾಪಕ, ನವ್ಯಕವಿ ಬಳಿದಾಳಿ ಕೆಂಪಯ್ಯ ಬರೆದಿರುವ 'ಅಲ್ಲಿ ನೋಡು ನೀನೇ ಇಲ್ಲಿ ನೋಡು ನೀನೇ' ಎಂಬ ಗೀತೆಯನ್ನು ಎಸ್.ಪಿ.ಬಾಲಸುಬ್ರಮಣ್ಯಂ ಅವರು.

'ನನ್ನೆದೆಯ ಬನಸಿರಿಯಲ್ಲಿ ನಲಿವ ನವ ಚಿಗುರೆ ನೀನು' ಎಂಬ ಗೀತೆಯನ್ನು ನವ ಗಾಯಕ ಸಿದ್ಧರಾಮು ಹಾಗೂ ಬಿ. ಆರ್. ಛಾಯಾ ಅವರೂ 'ನನ್ನ ನಿನ್ನ ಜೀವನ ಬಾಡಿದ ಹೂವಾಗಿ' ಎಂಬ ಗೀತೆಯನ್ನು ನವಗಾಯಕಿ ಸುಗಂಧಿ ರಾಧಾಕೃಷ್ಣರಾಜು ಅವರೂ, 'ಕರ್ನಾಟಕ ರಾಜ್ಯೋತ್ಸವ ಸೊಬಗಿನ ಸಿರಿ ಭುವನೇಶ್ವರಿ' ಎಂಬ ಗೀತೆಯನ್ನು ಎಸ್.ಪಿ.ಬಾಲಸುಬ್ರಮಣ್ಯಂ ಅವರೂ, 'ಬಂಗಾರಿ ಬಾರೇ ಬಾರೇ ಬಂಗಾರಿ' ಎಂಬ ಗೀತೆಯನ್ನು ಎಸ್. ಪಿ. ಬಾಲಸುಬ್ರಮಣ್ಯಂ ಹಾಗೂ ವೃಂದದವರ ಕಂಠಸಿರಿಯಲ್ಲಿ ನೂತನ ಸಂಗೀತ ನಿರ್ದೇಶಕ ಕೆ. ರಾಧಾಕೃಷ್ಣರಾವ್ ಅವರ ರಾಗ ಸಂಯೋಜನೆಯಲ್ಲಿ ಇತ್ತೀಚೆಗೆ ಧ್ವನಿಮುದ್ರಿಸಿಕೊಳ್ಳಲಾಗಿದೆ.

'ಪ್ರೇಮ'ಕ್ಕೆ ಬೆಲೆ ಕೊಟ್ಟ 'ದೇವ'

ಪ್ರೀತಿ-ಪ್ರೇಮಕ್ಕಿಂತ ಜಗದಲ್ಲಿ ಹಿರಿದಾದುದು ಬೇರೆ ಯಾವುದು? ಲಲಿತಾಂಜಲಿ-ನಾಗೇಶ್ ಒಬ್ಬರನ್ನೊಬ್ಬರು ಮನಸಾರೆ ಪ್ರೀತಿಸಿರುತ್ತಾರೆ. ಲಲಿತಾಂಜಲಿಯ ಪ್ರೀತಿಗೆ ಅವಳ ತಂದೆ ದೇವರಾಜ್ ಅಡ್ಡಿ ತಾಯಿಕರುಳು ತಡೆದೀತೆ? ತಾರಾ ತನ್ನ ಮಗಳನ್ನು ನಾಗೇಶ್ ಜೊತೆ ಎಲ್ಲಾದರೂ ಸುಖವಾಗಿ ಹೋಗಿ ಬಾಳು ಎಂದು ಕಳಿಸುತ್ತಾಳೆ. ಇದನ್ನು ಹೇಗೋ ಪತ್ತೆ ಹಚ್ಚಿದ ದೇವರಾಜ್, ಯುವಜೋಡಿಗಳನ್ನು ಬೆನ್ನಟ್ಟಿ ತನ್ನಲ್ಲಿಗೆ ಕರೆತರಲು ಆದೇಶ ನೀಡಿ ಅವರ ಮೋಟಾರ್ ಬೈಸಿಕಲ್‌ನ್ನು ನೀವು ಕುದುರೆಗಳ ಮೇಲೆ ಹೋಗಿ ಹಿಂಬಾಲಿಸಿ ನಾಗೇಶಗೆ ಹೊಡೆದು ಬುದ್ಧಿ ಕಲಿಸಿ ತನ್ನ ಮಗಳನ್ನು ತಂದೊಪ್ಪಿಸುವಂತೆ ತನ್ನ ಅಂಗರಕ್ಷಕ ತುಮಕೂರು ನಟರಾಜ್ ಹಾಗೂ ಪರಿಹಾರವನ್ನು ಕಳಿಸುತ್ತಾನೆ. ನಾಗೇಶ್-ಲಲಿತಾಂಜಲಿ ಎಷ್ಟೇ ಇವರಿಂದ ತಪ್ಪಿಸಿಕೊಳ್ಳಲಿಕ್ಕೆ ಪ್ರಯತ್ನ ಪಟ್ಟರೂ ಕಡೆಗೆ ಈ ದುಷ್ಟರ ಕೈಗೆ ಸಿಕ್ಕಿ ಬೀಳುತ್ತಾರೆ. ನಾಗೇಶ್‌ಗೆ ಈ ದುಷ್ಟರು ಹಣ್ಣುಗಾಯಿ ನೀರುಗಾಯಿ ಮಾಡುತ್ತಿದ್ದಾಗ ಸಾಕ್ಷಾತ್ ದೇವರೇ ಪ್ರತ್ಯಕ್ಷವಾದಂತೆ ಗುಡ್ಡಗಾಡಿನ ವನಂತೆ ಮಾರು ವೇಷ ಧರಿಸಿ ದೇವ (ವಿಷ್ಣುವರ್ಧನ್) ಆಗಮಿಸಿ ದುಷ್ಟರನ್ನು ತಮ್ಮ ಸಾಹಸ ಚಾತುರ್ಯದಿಂದ ಚೆಂಡಾಡಿ ಯುವಜೋಡಿಗಳಿಗೆ ರಕ್ಷಣೆ ನೀಡುತ್ತಾರೆ. ಸೋತುಮುಖ ಹಾಕಿಕೊಂಡು ದೇವರಾಜ್ ಬಳಿನಿಂತಾಗ ಅವರನ್ನು ಬೈದು ತಾನೇ 'ದೇವ'ನ ಬಳಿ ಬಂದು ತನ್ನ ಮಗಳನ್ನು ಕಳಿಸುವಂತೆ ಕೇಳಿಕೊಂಡಾಗ ಮಾರಾಮಾರಿ ಹೊಡೆದಾಟವೆ ನಡೆಯುತ್ತದೆ.

ಈ ಸಾಹಸಕಾರೀ ಸನ್ನಿವೇಶವನ್ನು ಜೂಡೋ ರತ್ನಂ ಸಾಹಸ ಸಂಯೋಜನೆಯಲ್ಲಿ ನಂದಗಡಿ ಹೊರಾಂಗಣ ಹಾಗೂ ಬೆಂಗಳೂರು ಅರಮನೆಯಲ್ಲಿ "ಶ್ರೀ ದುರ್ಗಾ ಆರ್ಟ್ ಪ್ರೊಡಕ್ಷನ್ಸ್" ಲಾಂಛನದಲ್ಲಿ ಬಿ. ನಾಗರೆಡ್ಡಿ ನಿರ್ಮಿಸುತ್ತಿರುವ 'ದೇವ' ವರ್ಣ ಚಿತ್ರಕ್ಕಾಗಿ ನಿರ್ದೇಶಕ ವಿಜಯ್ ಅವರು ರಾಜಾ ಅವರ ಛಾಯಾಗ್ರಹಣದಲ್ಲಿ ಚಿತ್ರೀಕರಿಸಿಕೊಂಡರು. ಕಳೆದ 20ರಿಂದ ಅಂತಿಮ ಹಂತದ ಚಿತ್ರೀಕರಣ ಬಿರುಸಿನಿಂದ ಸಾಗಿರುವ ಈ ಚಿತ್ರದ ಕಥೆ, ಚಿತ್ರಕಥೆಯನ್ನು ಎಂ. ಡಿ. ಸುಂದರ ಬರೆದಿದ್ದು ಬಿ. ಎಲ್. ವೇಣು ಸಂಭಾಷಣೆ ಒದಗಿಸಿದ್ದಾರೆ.

ಎ. ಎಲ್. ಭಾಸ್ಕರ್ ಸಹ ನಿರ್ದೇಶನ, ಉಪೇಂದ್ರಕುಮಾರ್, ಉಡುಪಿ ಜಯರಾಂ ನೃತ್ಯ ಸಂಯೋಜನೆ, ಬಾಬು, ರಾಜಾರಾವ್, ಸ್ವಾಮಿರಾವ್ ನಿರ್ಮಾಣ ನಿರ್ವಹಣೆಯಿರುವ ಈ ಚಿತ್ರದ ತಾರಾಬಳಗದಲ್ಲಿ ವಿಷ್ಣುವರ್ಧನ್, ರೂಪಿಣಿ, ದೇವರಾಜ್, ವಿಜಯಕಾಶಿ, ತಾರಾ, ಸುಧೀರ್, ಜ್ಯೋತಿ, ವಜ್ರಮುನಿ, ಬಾಲಕೃಷ್ಣ, ರಾಜಾನಂದ್, ರಾಮು ಪುರೋಹಿತ್ ಮುಂತಾದವರಿದ್ದಾರೆ.

ಲಕ್ಷ್ಮಿಯ ಹೊಸ ಚಿತ್ರ 'ಹೊಸ ಕಾವ್ಯ'

ಪಂಚ ಭಾಷಾ ತಾರೆ ಲಕ್ಷ್ಮಿ, 'ಕವಿತಾ ಚಿತ್ರ ಫಿಲಂಸ್' ಲಾಂಛನದಲ್ಲಿ ನಿರ್ಮಿಸಲಿರುವ 'ಹೊಸ ಕಾವ್ಯ' ವಿನೂತನ ಶೈಲಿಯ ವರ್ಣ ಚಿತ್ರಕ್ಕಾಗಿ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಶಬ್ದಗ್ರಾಹಕ ರಾಮನಾಥನ್ ನೇತೃತ್ವದಲ್ಲಿ ಶಂಕರ್-ಗಣೇಶ್ ಸಂಗೀತ ಸಂಯೋಜನೆಯಲ್ಲಿ ಆರ್.ಎನ್. ಜಯಗೋಪಾಲ್ ಬರೆದಿರುವ 'ಟಿಪ್ಪು ಸುಲ್ತಾನ್ ಮೈಸೂರ್ ಹುಲೀ... ಟಿಪ್ಪು ಜೈವಾನ್..., ನಮ್ಮೂರ್ ಇಲೀ' ಹಾಗೂ ಚಳಿಚಳಿ ತಂಪಿನ ಗಾಳಿ... ಈ ಎದೆಯಾಲೀ ಆಸೆಯ ಧಾಳಿ'

ಹಾಗೂ 'ತಾಯಿಬಳದೇವತೆ' ಕಣ್‌ಕಂಡ ನಿಜದೇವತೆ' ಹಾಗೂ 'ಹೆಣ್ಣಲ್ಲಿ ಅಂದ ತುಂಬಿಟ್ಟ ಪರದೇಸಿ ಬ್ರಹ್ಮ... ಗಂಡಲ್ಲಿ ಆಸೆ ತಂದಿಟ್ಟ... ಅವನಾಸನವಾಗ' ಎಂಬ ಗೀತೆಗಳನ್ನು ಎಸ್.ಪಿ.ಬಾಲಸುಬ್ರಮಣ್ಯಂ, ವಾಣೀ ಜಯರಾಂ ಹಾಗೂ ಮಂಜುಳಾ ಗುರುರಾಜ್ ಕಂಠಸಿರಿಯಲ್ಲಿ ಧ್ವನಿಮುದ್ರಿಸಿಕೊಳ್ಳಲಾಯಿತು.

ಶಿವಚಂದ್ರನ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಲಿರುವ ಈ ಚಿತ್ರದ ಛಾಯಾಗ್ರಾಹಕರು ವಿಶ್ವ ನಟರಾಜ್, ಆರ್.ಎನ್ ಜಯಗೋಪಾಲ್ ಸಾಹಿತ್ಯ, ಲೆನಿನ್ - ವಿ.ಟಿ.ವಿಜಯನ್ ಸಂಕಲನ, ಕಲಾ, ನೃತ್ಯ ಸಂಯೋಜನೆ ಎಚ್. ಎಸ್. ಜಯಕುಮಾರ್ ಸಹ ನಿರ್ದೇಶನ, ಆರ್. ಬಿ. ನಿಂಬಾಳ್ಕರ್, ಶೈಲೇಂದ್ರ, ಜೀವನ್ ನಿರ್ಮಾಣ ನಿರ್ವಹಣೆಯಿರುವ ಈ ಚಿತ್ರದ ತಾರಾಬಳಗದಲ್ಲಿ ಪ್ರಭಾಕರ್, ಲಕ್ಷ್ಮಿ, ರಮೇಶ್‌ಭಟ್, ಸಿ. ಆರ್. ಸಿಂಹ, ಸುಧೀರ್, ಜಾನಕಿ, ನಿಂಬಾಳ್ಕರ್ ಮುಂತಾದವರಿದ್ದಾರೆ. ತಾರೆ ಲಕ್ಷ್ಮೀ ಅವರ ಪುತ್ರಿ 'ಐಶ್ವರ್ಯ' ಈ ಚಿತ್ರದ ಮುಖಾಂತರ ಯುವ ನಾಯಕಿಯಾಗಿ ಮೊಟ್ಟಮೊದಲ ಬಾರಿಗೆ ಬೆಳ್ಳಿ ತೆರೆಗೆ ಪ್ರವೇಶಿಸುತ್ತಿದ್ದಾಳೆ. ಎಪ್ರಿಲ್ ಮೂರನೇ ವಾರದಲ್ಲಿ ಮೈಸೂರಿನಲ್ಲಿ ಈ ಚಿತ್ರದ ಚಿತ್ರೀಕರಣ ಕಾರ್ಯ ಆರಂಭಗೊಳ್ಳಲಿದೆ.



—"ಸಂತ ಶಿಶುನಾಳ ಶರೀಫ"— ಶ್ರೀಧರ್, ಸುಮನ್ ರಂಗನಾಥ್—

ವಾರದ ಮುಂಗಾರು

ಭಾನುವಾರ 21-5-1989



ಚಲನಚಿತ್ರಕ್ಕೊಂದು ಹೊಸ ಆಯಾಮ-3ಡಿ

ಸಮೂಹ ಮಾಧ್ಯಮಗಳಲ್ಲಿ ಅತ್ಯಂತ ಪ್ರಭಾವಶಾಲಿ ಪಾತ್ರ ವಹಿಸುತ್ತಿರುವ ಚಲನಚಿತ್ರ ರಂಗದಲ್ಲಿ ಅದ್ಭುತವನ್ನೆಸಗುವ ಸಾಮರ್ಥ್ಯ 3-ಡಿ ತಂತ್ರಜ್ಞಾನಕ್ಕಿದೆ... ತೆರೆಯಿಂದೀಚೆಗೆ ಕನಸುಗಳನ್ನು ಚಾಚಿ ಪ್ರೇಕ್ಷಕರನ್ನು ಬೆಕ್ಕಸಬೆರಗಾಗಿಸುವ 3-ಡಿ ಸಿನಿಮಾಗಳ ಮಾಯಾಲೋಕದ ಒಳಹೊರಗನ್ನು ಬಗೆವ ಪ್ರಯತ್ನವಿದು.

ಅಬ್ದುಲ್ ರೆಹಮಾನ್ ಪಾಷಾ

ಈಗ 3-ಡಿ ಯುಗ. 3-ಡಿ ಫೋಟೋ; 3-ಡಿ ಮುದ್ರಣ; 3-ಡಿ ಸಿನಿಮಾ; 3-ಡಿ ಟಿ.ವಿ.-ಹೀಗೆ 2-ಡಿ ಇದ್ದ ಒಂದೊಂದೆ ಈಗ 3-ಡಿ ಆಗುವ ಕಡೆಗೆ ಓಡುತ್ತಿವೆ. ಇದರಲ್ಲಿ ಈಗ ತುಂಬ ಸುದ್ದಿಯಲ್ಲಿರುವುದು ಎಂದರೆ 3-ಡಿ ಸಿನಿಮಾ. ಈ ಲೇಖನ ಬರೆಯುವ ಹೊತ್ತಿಗೆ 3-ಡಿ ಸಿನಿಮಾಗಳ ಒಂದು ಸುಗ್ಗಿ ಬಂದು ಹೋಗಿದೆಯಾದರೂ ತಂತ್ರಜ್ಞಾನ ಈಗ ಸುಲಭವಾಗಿ ಲಭ್ಯವಿರುವುದರಿಂದ 3-ಡಿ ಸಿನಿಮಾಗಳು ಮತ್ತೆ ಮತ್ತೆ ಬರುವ ಸಾಧ್ಯತೆಗಳಿವೆ. ಹಾಗೆ ನೋಡಿದರೆ ಇದು ಇದೀಗ ಬಂದಿರುವ ತಂತ್ರಜ್ಞಾನವೇನೂ ಅಲ್ಲ. ಮೂರು ನಾಲ್ಕು ದಶಕಗಳಷ್ಟು ಹಿಂದೆಯೇ ಇದರ ಆವಿಷ್ಕಾರವಾಗಿದೆ. ಆದರೆ ಭಾರತದಲ್ಲಿಯೇ ತಯಾರಾಗಿ ವ್ಯಾಪಕವಾಗಿ ಪ್ರದರ್ಶಿತವಾಗಿರುವುದರಿಂದ ಈಗ ಎಲ್ಲೆಲ್ಲೂ 3-ಡಿ ಚರ್ಚೆ.

3-ಡಿ ಎಂದರೇನು ?

ಇತ್ತೀಚೆಗೆ ಆಬಾಲವೃದ್ಧರಿಗೆ ಕುತೂಹಲ ಕೆರಳಿಸಿರುವ ಪ್ರಶ್ನೆಯಿದು. ಅತ್ಯಂತ ನೈಜವಾಗಿ ಕಾಣುವುದರ ಮೂಲಕ ಎಂಥವರನ್ನೂ ಬೆರಗುಗೊಳಿಸುವ ಈ ತಂತ್ರದ ಕುರಿತು ಜನ ತಮ್ಮ ಕಲ್ಪನಾನುಸಾರ ವಿವರಿಸಿಕೊಳ್ಳುತ್ತಿದ್ದಾರೆ. ಆದರೆ ಬಹಳಷ್ಟು ದಾರಿ ತಪ್ಪಿ ತಪ್ಪಾಗಿ, ತಮಗೆ ಸರಿ ತೋರಿದಂತೆ ಅರ್ಥ ಮಾಡಿಕೊಳ್ಳಲು ತೊಡಗಿದ್ದಾರೆ.

ಇಲ್ಲಿ ಡಿ ಎಂಬುದು ಇಂಗ್ಲಿಷಿನ ಡೈಮೆನ್ಷನ್ ಎಂದರೆ ಆಯಾಮ ಎಂದರ್ಥ. ಈ ಕಲ್ಪನೆಯನ್ನು ಅರ್ಥ ಮಾಡಿಕೊಳ್ಳಲು ಚಿತ್ರ 6.1 ನೋಡಿ

'ಅ' ಚಿತ್ರಕ್ಕೆ ಉದ್ದ ಹಾಗೂ ಎತ್ತರ ಹೀಗೆ ಎರಡೇ ಆಯಾಮಗಳು ಇರುವುದರಿಂದ ಇದು 2-ಡಿ. ಆದರೆ 'ಆ' ಚಿತ್ರದ ಉದ್ದ, ಅಗಲಗಳ ಜೊತೆಗೆ ಮೂರನೇ ಆಯಾಮ 'ಆಳ'ವೂ ಸೇರಿಕೊಂಡಿದೆ. ಎಂದರೆ ಇದು 3-ಡಿ ಸೂಚಿಸುವ ಚಿತ್ರ.

ನಾವು ನಿತ್ಯ ನೋಡುವ ಸಿನಿಮಾದ ದೃಶ್ಯಗಳು 2-ಡಿ ಚಿತ್ರಗಳು. ಕ್ಯಾಮರಾ ತಂತ್ರ; ಹಿನ್ನೆಲೆ, ಮುನ್ನೆಲೆಗಳ ಸಂಯೋಜನೆ; ಇವೇ ಮುಂತಾದುವುಗಳಿಂದ ದೃಶ್ಯಕ್ಕೆ 'ಆಳ'ವೂ ಇದೆ ಎಂಬ ಭ್ರಮೆ ಹುಟ್ಟಿಸಲಾಗುತ್ತದೆ. ಅದರಲ್ಲಿ ನೋಡುವ ದೃಶ್ಯಗಳಲ್ಲೂ ವ್ಯಕ್ತಿಗಳು ದಪ್ಪ ಕಾಣುತ್ತಾರೆ; ಕೋಣೆಗಳು ಆಳವಾಗಿರುತ್ತವೆ; ರೈಲ್ವೆ ಪ್ಲಾಟ್‌ಫಾರ್ಮುಗಳು ಉದ್ದಕ್ಕೆ ಒಳಚಾಚಿರುತ್ತವೆ. ಒಂದು ಫರ್ಲಾಂಗು ದೂರದಿಂದ ಒಂದು ಕುದುರೆ ಓಡುತ್ತೋಡುತ್ತಾ ನಮ್ಮ ಹತ್ತಿರಕ್ಕೆ ಬರುತ್ತದೆ, ಹೀಗೆಲ್ಲ ಆಳದ ಕಲ್ಪನೆ ಹುಟ್ಟಿಸಿದರೂ ಅದು ಮಿಥ್ಯವಾಗಿಯೇ ತೋರುತ್ತದೆ.

ಆದರೆ 3-ಡಿ ಚಿತ್ರದಲ್ಲಿ ಆಳದ ಅನುಭವವೂ ಅತ್ಯಂತ ನಿಜವಾಗಿ ತೋರುತ್ತದೆ. ಪರದೆಯ ತಲದಿಂದ ಆಚೆಯೂ ನಿಜವಾಗಿಯೂ ದೃಶ್ಯ ಆಳವಾಗಿ ತೋರುತ್ತದೆ, ವಸ್ತು, ವ್ಯಕ್ತಿಗಳು ಸಪ್ರಮಾಣ ಗಾತ್ರ, ದೂರಗಳಲ್ಲಿ ಕಾಣುತ್ತಾರೆ. ದೂರಗಳನ್ನು ನಿಜವಾಗಿಯೂ ಸಪ್ರಮಾಣ ಗಾತ್ರ, ದೂರಗಳಲ್ಲಿ ಕಾಣುತ್ತಾರೆ. ದೂರಗಳನ್ನು ನಿಜವಾಗಿಯೂ ಕ್ರಮಿಸಿಯೇ ಜನ, ವಾಹನ, ಪ್ರಾಣಿಗಳು ಹತ್ತಿರಕ್ಕೆ ಬಂದಂತೆ, ದೂರಕ್ಕೆ ಹೋದಂತೆ ತೋರುತ್ತದೆ.

ಪರದೆಯ ತಲದ ಆಚೆಗಿನ ಆಳಕ್ಕಿಂತ, 3-ಡಿಯಲ್ಲಿ ಅತ್ಯಂತ ಬೆರಗಿನ ಅನುಭವವೆಂದರೆ, ದೃಶ್ಯ ಪರದೆಯ ತಲವನ್ನು ದಾಟಿಕೊಂಡು ಮುಂದಕ್ಕೆ, ಥಿಯೇಟರಿನಲ್ಲಿ ನುಗ್ಗಿ ಬರುವುದು. ಉದಾಹರಣೆಗೆ ಪರದೆ ಮೇಲಿನ ದೃಶ್ಯದಲ್ಲಿ ಒಬ್ಬ ವ್ಯಕ್ತಿ ನಮ್ಮ ಕಡೆ ಮುಖಮಾಡಿ ನಿಂತು ತನ್ನೆದುರು ಕೈಚಾಚಿದರೆ ಆ ಕೈ ಪರದೆಯನ್ನು ದಾಟಿ, ಸೀಟಲ್ಲಿ ಕುಳಿತು ನೋಡುತ್ತಿರುವ ಪ್ರೇಕ್ಷಕನವರೆಗೂ ಚಾಚಿ ಬರುತ್ತದೆ. ಕುಳಿತಿರುವ ಪ್ರೇಕ್ಷಕ ತನ್ನ ಕೈಯನ್ನು ಮುಂದಕ್ಕೆ ಚಾಚಿ ಅದನ್ನು ಹಿಡಿದುಕೊಳ್ಳಬಹುದೇನೋ ಎನ್ನುವಷ್ಟು ಸಹಜವಾಗಿ ತೋರುತ್ತದೆ. ಪರದೆಯಿಂದ ಹಾರಿ ಬರುವ ಹಕ್ಕಿ ನಮ್ಮ ತಲೆಯ ಮೇಲೆ ಹಾದು ಹೋದ ಹಾಗೆ, ದೃಶ್ಯದಲ್ಲಿರುವ ಹುಡುಗಿ ಎಸೆದ ವಸ್ತು ನಮ್ಮ ತಲೆಯ ಮೇಲೆ ಹಾದು ಹೋದ ಹಾಗೆ, 'ತಗೊಳ್ಳಿ' ಎಂದು ಕಾಫಿ ಕೊಟ್ಟರೆ ಕೈಚಾಚಿ ತೆಗೆದುಕೊಂಡೇ ಬಿಡಬೇಕೇನೋ ಎನ್ನುವಂತೆ-ಹೀಗೆ ಮುಖ್ಯವಾಗಿ ಪರದೆಗಿಂತ ಮುಂಚಾಚಿ ಬರುವ ದೃಶ್ಯಗಳಿಂದಾಗಿ 3-ಡಿ ಹೆಚ್ಚು ರೋಮಾಂಚಕಾರಿಯಾಗಿ ತೋರುತ್ತದೆ. 2-ಡಿ ಚಿತ್ರದಾತ ಇದೂ ನೈಜತೆಯ ಭ್ರಮೆಯಾಗಿದ್ದರೂ, ಅನುಭವ 2-ಡಿಗಿಂತ ಹೆಚ್ಚು ವಾಸ್ತವ ಎನ್ನಿಸುತ್ತದೆ.

ಏನಿದರ ರಹಸ್ಯ ?

ಯಾವುದೇ ಚಲನಚಿತ್ರ ನಮ್ಮ ಕಣ್ಣೆದುರಿಗೆ ನಡೆಯುತ್ತಿದೆಯೇನೋ ಎನ್ನುವಷ್ಟು ನೈಜವಾಗಿ ದೃಶ್ಯಗಳನ್ನು ತೋರಿಸುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಕ್ಯಾಮರ ದೃಶ್ಯಗಳನ್ನು ಚಿತ್ರೀಕರಿಸುವಾಗ, ನಂತರ ಚಿತ್ರೀಕೃತ ದೃಶ್ಯಗಳನ್ನು ಸಂಕಲಿಸುವಾಗ ನಮ್ಮ ಕಣ್ಣು ಹೊರಪ್ರಪಂಚವನ್ನು ನೋಡುವ ಗ್ರಹಿಸುವ ವಿಧಾನವನ್ನೆ ಅನುಸರಿಸುವುದು. ಸಾಮಾನ್ಯ ಚಲನ ಚಿತ್ರದಲ್ಲಿ ಒಂದು ಲೆನ್ಸಿನ ಸಹಾಯದಿಂದ ಚಿತ್ರೀಕರಣ ಮಾಡಿರುತ್ತಾರೆ. ಹೀಗಾಗಿ ನಾವು ನೋಡುವ ದೃಶ್ಯ ಒಂದು ಕಣ್ಣು ಮುಚ್ಚಿ ಇನ್ನೊಂದೇ ಕಣ್ಣಿನಿಂದ ನೋಡಿದಂತೆ. ನಿಜದಂತೆ ಕಂಡರೂ, ಅಷ್ಟರ ಮಟ್ಟಿಗೆ ಅಸಹಜವಾಗಿರುತ್ತದೆ. ಏಕೆಂದರೆ ನಾವು ಪ್ರಪಂಚವನ್ನು ಏಕಕಾಲದಲ್ಲಿ ಎರಡೂ ಕಣ್ಣುಗಳಿಂದ ನೋಡುತ್ತೇವೆ. ಅದಕ್ಕೆಂದೆ ನೋಡುವುದೆ ಸಹಜವಾಗಿ, ಸಾಲಿಡ್ ಆಗಿ ಕಾಣಿಸುತ್ತದೆ. 3-ಡಿ ಸಿನಿಮಾ ಈ ರಹಸ್ಯವನ್ನು ತನ್ನ ತಂತ್ರವಾಗಿ ಬಳಸಿಕೊಳ್ಳುತ್ತದೆ. ಎರಡೂ ಕಣ್ಣುಗಳೂ ಒಟ್ಟಿಗೆ ನೋಡುವ ಕ್ರಮವನ್ನು ತಾಂತ್ರಿಕವಾಗಿ ಅನುಕರಿಸಿ ಅತ್ಯಂತ ನೈಜತೆಯನ್ನು ಸಾಧಿಸುತ್ತದೆ.

ಈಗ ನಮ್ಮ ಕಣ್ಣಿನಿಂದ ಒಂದು ವಸ್ತುವನ್ನು ಹೇಗೆ ನೋಡುತ್ತೇವೆ ಎಂಬುದನ್ನು ಗಮನಿಸೋಣ. ಒಂದು ವಸ್ತುವನ್ನು ನಾವು ನೋಡುತ್ತಿದ್ದೇವೆ ಎಂದರೆ ಆ ವಸ್ತುವಿನ ಬಿಂಬ ನಮ್ಮ ಕಣ್ಣುಗಳ ಅಕ್ಷಿಪಟಲ(ರೆಟಿನಾ)ದ ಮೇಲೆ ಮೂಡುತ್ತದೆ ಎಂದರ್ಥ. ಅಲ್ಲವೆ? ಒಂದೇ ವಸ್ತುವನ್ನು ಪರಸ್ಪರ ಏಳೆಂಟು ಅಡಿ ಅಂತರದಲ್ಲಿ ನಿಂತಿರುವ ಇಬ್ಬರು ವ್ಯಕ್ತಿಗಳು ನೋಡುವುದಾದರೆ ಒಬ್ಬ ನೋಡುವುದಕ್ಕಿಂತ ಸ್ವಲ್ಪ ಭಿನ್ನ ರೀತಿಯಲ್ಲಿ, ಇನ್ನೊಬ್ಬ ಅದೇ ವಸ್ತುವನ್ನು ನೋಡುತ್ತಾನೆ. ಇವರಿಬ್ಬರ ನಡುವೆ ಅಂತರ ಕಡಿಮೆಯಾದರೆ ಆ ವ್ಯತ್ಯಾಸದ ಪ್ರಮಾಣ ಕಡಿಮೆಯಾದೀತೆ ವಿನಾ ಇಬ್ಬರೂ ಆ ವಸ್ತುವನ್ನು ಒಂದೇ ರೀತಿಯಲ್ಲಿ ನೋಡುವುದಿಲ್ಲ.

ಹಾಗೆಯೇ ಒಂದು ನಿರ್ದಿಷ್ಟ ವಸ್ತುವನ್ನು ನೋಡುತ್ತಿದ್ದರೂ ನಮ್ಮ ಎರಡು ಕಣ್ಣುಗಳ ನಡುವೆ ಸುಮಾರು ಮೂರು ಅಂಗುಲ ಅಂತರವಿರುವುದರಿಂದ ಎರಡು ಕಣ್ಣುಗಳು ಆ ವಸ್ತುವನ್ನು ಪರಸ್ಪರ ಸ್ವಲ್ಪ ಭಿನ್ನವಾಗಿ ನೋಡುತ್ತವೆ. ಎಂದರೆ ಆ ವಸ್ತು ಎರಡೂ ಕಣ್ಣುಗಳಲ್ಲಿ ಉಂಟುಮಾಡುವ ಪ್ರತಿಬಿಂಬಗಳು ಒಂದೇ ರೀತಿಯವು ಆಗಿರುವುದಿಲ್ಲ. ಪ್ರತಿಯೊಂದು ಕಣ್ಣು ಆ ವಸ್ತುವಿನ ವಿವಿಧ ಭಾಗಗಳನ್ನು ನೋಡುತ್ತಿರುವ ದೂರ, ದಿಕ್ಕನ್ನು ಅವಲಂಬಿಸಿ ಸೂಕ್ಷ್ಮವಾಗಿ ವ್ಯತ್ಯಾಸ ಹೊಂದಿರುವ ಬಿಂಬ 1 ಹಾಗೂ ಬಿಂಬ2 ಮೂಡುತ್ತವೆ. ಒಂದೇ ಘನಾಕೃತಿಯನ್ನೂ ನೋಡಿದಾಗ ಅದು ಎಡ ಮತ್ತು ಬಲ ಕಣ್ಣಿನಲ್ಲಿ ಉಂಟುಮಾಡುವ ಬಿಂಬಗಳ ವ್ಯತ್ಯಾಸವನ್ನು ಚಿತ್ರ 6.3ರಲ್ಲಿ ನೋಡಬಹುದು.?

ಈ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಒಂದು ಸರಳ ಪ್ರಯೋಗ ಮಾಡಬಹುದು; ನೀವೀಗ ಕುಳಿತಲ್ಲೆ ಇದನ್ನು ಮಾಡಲು ಸಾಧ್ಯವಿರುವುದರಿಂದ ನೀವೂ ಇದನ್ನು ಮಾಡಿಯೇ ತಿಳಿದುಕೊಳ್ಳಿ. ಏಕ್ಕ

ಕಣ್ಣುದುರಿಗೆ ಬೆರಳನ್ನು ಹಿಡಿದುಕೊಂಡು ದೂರದ ಒಂದು ನಿರ್ದಿಷ್ಟ ದೂರದಲ್ಲಿ ಹಿಡಿದುಕೊಳ್ಳಿ. ಈಗ ಅದನ್ನು ಎರಡೂ ಕಣ್ಣುಗಳಿಂದ ನೋಡುವ ಬದಲಿಗೆ, ಒಮ್ಮೆ ಎಡಗಣ್ಣಿಂದ ಮಾತ್ರ, ನಂತರ ಬಲಗಣ್ಣಿಂದ ಮಾತ್ರ ನೋಡಿ. ಏನು ಕಾಣುತ್ತದೆ?

ಕಣ್ಣುಗಳನ್ನು ಬದಲಾಯಿಸಿದಾಗ ಬೆರಳು ತನ್ನ ಸ್ಥಾನವನ್ನು ಬದಲಿಸಿದಂತೆ ಕಾಣುತ್ತದೆ. ಹಾಗೆಯೇ ವಿಭಿನ್ನ ಕಣ್ಣು ಬೆರಳನ್ನು ನೋಡುವ ಸೂಕ್ಷ್ಮ ವ್ಯತ್ಯಾಸವನ್ನೂ ಗಮನಿಸಿ. ಈ ಸ್ಥಾನಗಳು ಆಯಾ ಕಣ್ಣು ಪ್ರತ್ಯೇಕವಾಗಿ ಆ ವಸ್ತುವನ್ನು ಕಾಣುವ ಸ್ಥಾನ ಹಾಗೂ ರೀತಿಗಳು.

ಹೀಗೆ ಮಾಡುತ್ತ ಈಗ ಎರಡೂ ಕಣ್ಣುಗಳನ್ನು ತೆರೆದಿಟ್ಟು ನೋಡಿ. ನೀವು ಮೊದಲು ಪ್ರತ್ಯೇಕ ಕಣ್ಣುಗಳಿಂದ ನೋಡಿದ ಸ್ಥಾನಗಳ ಮಧ್ಯಭಾಗದಲ್ಲಿ ಬೆರಳು ಕಾಣಿಸುತ್ತದೆ. ಮತ್ತು ಕಾಣಿಸುವ ರೀತಿಯೂ ಅವೆರಡಕ್ಕಿಂತ ಭಿನ್ನವಾಗಿರುತ್ತದೆ.

ಇಲ್ಲಿ ವಾಸ್ತವವಾಗಿ ಆಗುತ್ತಿರುವುದು ಏನೆಂದರೆ ಒಂದೊಂದೆ ಕಣ್ಣಿನ ಮೇಲೆ ಮೂಡಿದ ಮಾಹಿತಿ ಮಿದುಳಿನ ದೃಷ್ಟಿ ಕೇಂದ್ರಕ್ಕೆ ತಲುಪಿದಾಗ ಅದು 6.4 ಚಿತ್ರದಲ್ಲಿ ಎರಡೂ ಕಣ್ಣುಗಳಿಂದ, ಸೂಕ್ಷ್ಮ ಭಿನ್ನತೆಯುಳ್ಳ ಎರಡು ರೀತಿಯ ಮಾಹಿತಿ ಮಿದುಳಿಗೆ ತಲುಪಿದಾಗ, ಅದನ್ನು ಮಿದುಳಿನ ದೃಷ್ಟಿ ಕೇಂದ್ರ ಬೆರಸಿ ವಸ್ತುವಿನ ಒಂದೇ ಸಂಯೋಜಿತ, ಸಮಗ್ರ ಚಿತ್ರವನ್ನು ನಮ್ಮ ಮನಸ್ಸಿನಲ್ಲಿ ಮೂಡಿಸುತ್ತದೆ. ನೋಡುವ ದೃಶ್ಯ ಸಾಲಿಡ್ ಆಗಿ 3-ಡಿಯಲ್ಲಿ ಕಾಣುತ್ತವೆ.

ತಾತ್ಪರ್ಯ : ಒಂದು ನೈಜವಾಗಿ, ಜೀವಂತವಾಗಿ 3-ಆಯಾಮದಲ್ಲಿ ಕಾಣಿಸಬೇಕು ಎಂದಾದರೆ ಆ ವಸ್ತುವಿನ, ಪರಸ್ಪರ ಸೂಕ್ಷ್ಮ ವ್ಯತ್ಯಾಸವುಳ್ಳ ಎರಡು ಬಿಂಬಗಳು ಪ್ರತ್ಯೇಕವಾಗಿ ಎರಡು ಕಣ್ಣುಗಳಲ್ಲಿ ಮೂಡಬೇಕು.

ತ್ರಿ-ಡಿ ಚಿತ್ರ ತನ್ನ ಚಿತ್ರೀಕರಣ ಹಾಗೂ ಪರದೀಕರಣದಲ್ಲಿ ಈ ಸಹಜ ತತ್ವವನ್ನೆ ಅನುಸರಿಸುತ್ತದೆ.

3-ಡಿ ಚಿತ್ರೀಕರಣ

ಒಂದೇ ದೃಶ್ಯದ ಎರಡು ಬಿಂಬಗಳು ಬೇಕು. ಸರಿ; ಆ ದೃಶ್ಯವನ್ನು ಎರಡು ಕ್ಯಾಮರಾಗಳಿಂದ ಎರಡು ಫಿಲ್ಮುಗಳ ಮೇಲೆ ಚಿತ್ರೀಕರಿಸಿದರೆ ಆಯಿತಲ್ಲ? ಇಲ್ಲ. ಈ ಎರಡು ಕ್ಯಾಮರಾಗಳ ಲೆನ್ಸುಗಳು ಆ ದೃಶ್ಯವನ್ನು ಎರಡು ಕಣ್ಣುಗಳ ನಡುವಿನಷ್ಟೆ ಅಂತರದಲ್ಲಿಟ್ಟುಕೊಂಡು ನೋಡಿರಬೇಕು.

ಇದು ಸಾಧ್ಯವಾಗುವಂತೆ ಒಂದೇ ಕ್ಯಾಮರದಲ್ಲಿ 2 ಲೆನ್ಸುಗಳನ್ನು ಅಳವಡಿಸಿ 3-ಡಿ ಕ್ಯಾಮರಾವನ್ನು ವಿಶೇಷವಾಗಿ ರಚಿಸಲಾಗಿರುತ್ತದೆ. ಈ ಸಂಯುಕ್ತ ಕ್ಯಾಮರಾದಲ್ಲಿ 2 ಫಿಲ್ಮುಗಳು ಏಕಕಾಲಕ್ಕೆ ಓಡುತ್ತವೆ ಹಾಗೂ ಇವುಗಳ ಮೇಲೆ ದೃಶ್ಯವನ್ನು ಮೂಡಿಸುವ ಲೆನ್ಸುಗಳ ಮಧ್ಯದ ಅಂತರ ಒಬ್ಬ ಸಾಮಾನ್ಯ ಮನುಷ್ಯನ ಕಣ್ಣುಗಳ ನಡುವಿನ ಅಂತರದಷ್ಟೆ ಇರುತ್ತದೆ.

ಹೀಗೆ ಚಿತ್ರಿಕರಿಸಿದ ಚಿತ್ರವನ್ನು ಪರದೆ ಮೇಲೆ ಬಿಡುವ ಪ್ರೊಜೆಕ್ಟರೂ ವಿಶೇಷವಾಗಿ ರಚಿತವಾಗಿರುತ್ತದೆ. ಎರಡು ಲೆನ್ಸುಗಳ ಮೂಲಕ ಏಕಕಾಲಕ್ಕೆ ಪರದೆ ಮೇಲೆ ಬಿಡಲಾಗುತ್ತದೆ. ಪ್ರತಿ ದೃಶ್ಯ ಘಟನೆವೂ ನಿರಂತರವಾಗಿ ಎರಡೂ ಫಿಲ್ಮುಗಳ ಮೇಲೆ ಚಿತ್ರಿಕರಿಸಿರುವುದರಿಂದ ಈ ಚಿತ್ರಪಟ್ಟಿಗಳು ಒಂದಕ್ಕೊಂದು ಫ್ರೇಮಿಗೆ ಫ್ರೇಮು ಹೊಂದಿಕೊಂಡೇ ಓಡಬೇಕಾಗುತ್ತದೆ. ಅಕಸ್ಮಾತ್ ಒಂದು ಫಿಲ್ಮು ಹರಿದು ಕೆಲವು ಫ್ರೇಮುಗಳು ಹಾಳಾದರೆ ಅದಕ್ಕೆ ಸಮಾನಾದಷ್ಟು ಫ್ರೇಮುಗಳನ್ನು ಇನ್ನೊಂದು ಫಿಲ್ಮಿನಿಂದಲೂ ಕತ್ತರಿಸಿ ತೆಗೆಯಬೇಕು.

ಹೀಗೆ ಚಿತ್ರಿಕರಣಕ್ಕೆ ವಿಶೇಷ ಕ್ಯಾಮರಾ, ಪರದೀಕರಿಸಲು, 2 ಲೆನ್ಸುಗಳನ್ನು ಹೊಂದಿದ್ದು, ಎರಡು ಫಿಲ್ಮುಗಳನ್ನು ಏಕಕಾಲಕ್ಕೆ ಓಡಿಸಲು ಸಾಧ್ಯವಿರುವ ವಿಶೇಷ ಪ್ರೊಜೆಕ್ಟರು, ವಿಶೇಷ ಪರದೆ ಇವೆಲ್ಲ ಬೇಕಾಗುತ್ತದೆ. ಹೀಗಾಗಿ ಕಿಷ್ಕಿಂಧೆ ಪಟ್ಟಣಗಳಲ್ಲಿ ಇದರ ಪ್ರದರ್ಶನ ಸುಲಭ ಸಾಧ್ಯವಲ್ಲ.

ಇದು ಹಳೆಯ ನಮೂನೆಯಿತು

ಈಗ? ಈಗ 3-ಡಿ ಚಿತ್ರವನ್ನು ಸಿನಿಮಾ ಸ್ಕೋಪ್ ಅಗಲದ ಪರದೆ ಇರುವ ಯಾವುದೇ ಚಿತ್ರ ಮಂದಿರದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿಕೊಂಡು ತೋರಿಸಬಹುದಾಗಿದೆ. ಈಗ ಎರಡು ಫಿಲ್ಮುಗಳನ್ನು ಪ್ರತ್ಯೇಕವಾಗಿ ಓಡಿಸಬೇಕಾಗಿಲ್ಲ. ಬದಲಿಗೆ 2 ಕಣ್ಣಿನಂತಹ ಲೆನ್ಸುಗಳಿಂದಚಿತ್ರೀಕರಿಸಿದ ಸೂಕ್ಷ್ಮ ವ್ಯತ್ಯಾಸದ 2 ಚಿತ್ರಗಳನ್ನೂ ಒಂದೇ ಫಿಲ್ಮಿನ ಮೇಲೆ ಮುದ್ರಿಸಲಾಗಿರುತ್ತದೆ. ಪ್ರತಿ ಚಿತ್ರ ಚೌಕಟ್ಟಿನ ಮೇಲರ್ಧದಲ್ಲಿ ಒಂದು ಚಿತ್ರ ಕೆಳಾರ್ಧದಲ್ಲಿ ಇನ್ನೊಂದು ಚಿತ್ರವನ್ನು ಮುದ್ರಿಸಿರುತ್ತಾರೆ.

ಈ ಡಬ್ಬಲ್ ಚಿತ್ರಗಳ ಚೌಕಟ್ಟು ಸಾಮಾನ್ಯ 35 ಎಂ. ಎಂ. ಚೌಕಟ್ಟಿಗಿಂತ ಸ್ವಲ್ಪ ಎತ್ತರವಿರುತ್ತದೆ. ಆದರೆ ಫಿಲ್ಮಿನ ಅಗಲತೆ 35 ಎಂ. ಎಂ. ನೇ ಆಗಿದ್ದು, ಅಕ್ಕ ಪಕ್ಕದ ರಂಧ್ರಗಳ ವಿನ್ಯಾಸ ಇತ್ಯಾದಿಯಲ್ಲಿ ಸಾಮಾನ್ಯ 35 ಎಂ. ಎಂ. ಚಿತ್ರಗಳಲ್ಲೂ ಈ ಫಿಲ್ಮನ್ನು ಓಡಿಸಬಹುದಾಗಿದೆ. ಆದರೆ ಲೆನ್ಸ್ ಮಾತ್ರ ವಿಶೇಷವಾಗಿ ರಚಿತವಾದ ಸಂಯುಕ್ತ ಲೆನ್ಸ್ ಆಗಿರುತ್ತದೆ.

ಮೇಲೆ ವಿವರಿಸಿದ ರೀತಿಯ ಫಿಲ್ಮಿನ ಚೌಕಟ್ಟನ್ನು ಸಾಮಾನ್ಯ ಲೆನ್ಸಿನ ಮೂಲಕ ಪ್ರೊಜೆಕ್ಟ್ ಮಾಡಿದರೆ ಪರದೆಯ ಮೇಲೆ, ಫಿಲ್ಮಿನ ಮೇಲೆ ಇರುವ ಹಾಗೆಯೇ 2 ಚಿತ್ರಗಳು ಬೀಳುತ್ತವೆ.

ಇನ್ನು ಇದನ್ನೆ ಚಲನಚಿತ್ರವಾಗಿ ಸೆಕೆಂಡಿಗೆ 24 ಚೌಕಟ್ಟುಗಳ ವೇಗದಲ್ಲಿ ಪರದೆ ಮೇಲೆ ಬಿಟ್ಟರೆ ಪರದೆಯ ಕೆಳ ಮತ್ತು ಮೇಲೆ ಎರಡೂ ಅರ್ಧ ಭಾಗಗಳಲ್ಲಿ ಪ್ರತ್ಯೇಕವಾಗಿ ಚಿತ್ರ ನಡೆಯುತ್ತಿರುವುದನ್ನು ನೋಡಬಹುದು. ಆದರೆ ಎರಡು ಚಿತ್ರಗಳನ್ನು ಸೃಷ್ಟಿಸುವ ಉದ್ದೇಶ ಇದಾಗಿರಲಿಲ್ಲ.

ಎರಡು ಚಿತ್ರಗಳನ್ನು ಮುದ್ರಿಸಿರುವ 3-ಡಿ ಚಿತ್ರವನ್ನು ಪರದೆ ಮೇಲೆ ಬಿಡಲು ವಿಶೇಷವಾಗಿ ತಯಾರಿಸಲಾದ ಒಂದು ಲೆನ್ಸಿನ ವ್ಯವಸ್ಥೆ ಇರುತ್ತದೆ. ಇದು ಫ್ರೇಮಿನ ಮೇಲಿರುವ ಎರಡು ಚಿತ್ರಗಳನ್ನು ಪ್ರತ್ಯೇಕಿಸಿ, ಪರದೆಯ ಮೇಲೆ ಅರ್ಧ-ಅರ್ಧಕ್ಕೆ ಬಿಡದೇ, ಇಡೀ ಪರದೆಯ ಮೇಲೆ ಒಂದರ ಮೇಲೆ ಒಂದು ಸೂಪರ್ ಇಂಪೋಸ್ ಆಗುವಂತೆ ಬಿಡುತ್ತದೆ.

ಎಲ್ಲರಿಗೂ ಕನ್ನಡಕ

ಈವರೆಗೆ ವಿವರಿಸಿದ ವಿಧಾನದಲ್ಲಿ ಒಂದೇ ವಸ್ತುವಿನ, ಸ್ವಲ್ಪ ವ್ಯತ್ಯಾಸದ ಎರಡು ಪ್ರತಿಬಿಂಬಗಳನ್ನು ಸೃಷ್ಟಿಸುವುದು ಸಾಧ್ಯವಾಯಿತು. ಆದರೆ ಅವೆರಡೂ ಒಟ್ಟಿಗೆ ಪರದೆ ಮೇಲೆ ಮೂಡಿರುವುದರಿಂದ ಬರಿಗಣ್ಣಿನಿಂದ ನೋಡಿದಾಗ ಸಹಜವಾಗಿಯೇ ಎರಡೂ ಕಾಣಿಸುತ್ತದೆ. ಆದರೆ ದೃಶ್ಯ ನೈಜವಾಗಿ 3-ಡಿ ಯಲ್ಲಿ ಕಾಣಿಸಬೇಕು ಎಂದಾದರೆ ಒಂದೊಂದು ಕಣ್ಣಲ್ಲಿ ಒಂದೊಂದು ಬಿಂಬ ಕಾಣಿಸಬೇಕಲ್ಲ? ಅಥವ ಒಂದು ಕಣ್ಣಲ್ಲಿ ಬೀಳುವ ಬಿಂಬ ಇನ್ನೊಂದರಲ್ಲಿಯೂ ಬೀಳದಂತೆ ತಡೆಯಬೇಕಲ್ಲ. ಈ ಕೆಲಸವನ್ನು ಒಂದು ಕನ್ನಡಕ ಮಾಡುವುದು; ಹಾಗೆ 3-ಡಿ ಚಿತ್ರ ನೋಡುವ ಎಲ್ಲರೂ ಈ ಕನ್ನಡಕವನ್ನು ಹಾಕಲೇಬೇಕು.

3-ಡಿ ಚಿತ್ರ ನೋಡಲು ಬರುವ ಪ್ರತಿಯೊಬ್ಬ ಪ್ರೇಕ್ಷಕನಿಗೂ ಪ್ರವೇಶ ದ್ವಾರದಲ್ಲಿ ಒಂದು ಬಣ್ಣದ ಕನ್ನಡಕವನ್ನು ಕೊಡಲಾಗುತ್ತದೆ. ಅದನ್ನು ಹೋಗುವಾಗ ಹಿಂದಿರುಗಿಸಿ ಹೋಗಬೇಕು ಎಂದು ಹೇಳುವುದರ ಜೊತೆಗೆ ಕನ್ನಡಕ ಹಾಕಿಕೊಂಡೇ ನೋಡಬೇಕು. ಕನ್ನಡಕದ ಗಾಜನ್ನು ಕೈಯಿಂದ ಮುಟ್ಟಬಾರದು ಎಂದೆಲ್ಲ ಸೂಚನೆ ನೀಡಲಾಗಿರುತ್ತದೆ. ನೋಡಲು ನಾವು ಹಳ್ಳಿಗಳಲ್ಲಿ ಜಾತ್ರೆಗಳಲ್ಲಿ ಮಕ್ಕಳು ಹಾಕಿಕೊಂಡು ಓಡಾಡುವುದನ್ನು ನೋಡುತ್ತೇವಲ್ಲ, ಅಷ್ಟೆ ಸಾಧಾರಣವಾಗಿ ತೋರುತ್ತದೆ. ಆದರೆ ಲಕ್ಷಾಂತರ ರೂಪಾಯಿ ಖರ್ಚುಮಾಡಿ ಒಂದು 3-ಡಿ ಚಿತ್ರ ತಯಾರಿಸಿದ ನಂತರ ಒಂದೆರಡು ರೂಪಾಯಿ ಬೆಲೆಬಾಳುವ ಈ ಕನ್ನಡಕ ಇಲ್ಲದಿದ್ದರೆ 3-ಡಿಪರಿಣಾಮ ಉಂಟಾಗುವುದೇ ಇಲ್ಲ. ಅಷ್ಟು ಮುಖ್ಯ ಈ 3-ಡಿ ಕನ್ನಡಕ.

ಪರದೆ ಮೇಲಿರುವ ಎರಡು (ಬಿಂಬ 1 ಹಾಗೂ ಬಿಂಬ 2) ದೃಶ್ಯಗಳ ಹಾಗೂ 3-ಡಿ ಕನ್ನಡಕದ ಎರಡು (ಪ್ಲಾಸ್ಟಿಕ್) ಗಾಜುಗಳ ವರ್ಣ ಸಂಯೋಜನೆ ಹೇಗೆ ಇರುತ್ತದೆ ಎಂದರೆ:

ಕನ್ನಡಕದ ಗಾಜು 1ರಲ್ಲಿ ಬಿಂಬ 2 ಸೋಸಿ ಹೋಗಿ, ಬಿಂಬ 1 ಮಾತ್ರ ಹಾದು ಒಂದು ಕಣ್ಣಿಗೆ ಕಾಣಿಸುತ್ತದೆ.

ಕನ್ನಡಕದ ಗಾಜು 2ರಲ್ಲಿ ಬಿಂಬ 1 ಸೋಸಿ ಹೋಗಿ ಬಿಂಬ 2 ಮಾತ್ರ ಹಾದು ಇನ್ನೊಂದು ಕಣ್ಣಿಗೆ ಕಾಣಿಸುತ್ತದೆ.

ಇದು ನಾವು ಬರಿಗಣ್ಣಿನಿಂದ ಜಗತ್ತನ್ನು ನೋಡುವ ಕ್ರಮದಲ್ಲಿ ಇರುವುದರಿಂದ ಪರದೆ ಮೇಲಿನ ದೃಶ್ಯ ನೈಜವಾಗಿ ಮೂರ್ತವಾಗಿ ಕಾಣುತ್ತದೆ.

ಭಾರತದಲ್ಲಿ 3-ಡಿ ಕ್ರಾಂತಿ

25-30 ವರ್ಷಗಳ ಹಿಂದೊಮ್ಮೆ, ಭಾರತದ ದೊಡ್ಡ ನಗರಗಳಲ್ಲಿ 'ಹೌಸ್ ಆಫ್ ವ್ಯಾಕ್ಸ್' ಎಂಬ 3-ಡಿ ಇಂಗ್ಲಿಷ್ ಚಿತ್ರ ಪ್ರದರ್ಶಿತವಾಯಿತು. ನೋಡಿದವರಿಗೆ ಬೆರಗು, ರೋಮಾಂಚನ; ನೋಡಲು ಅವಕಾಶ ಸಿಗದಿದ್ದವರಿಗೆ ಅದರ ಕುರಿತು ಕೇಳಿಯೇ ನಂಬಲಾಗದಷ್ಟು ಆಶ್ಚರ್ಯ ಆಗಿತ್ತು. ನಂತರದ ವರ್ಷಗಳಲ್ಲಿ ಈ ಸುದ್ದಿ ಕರಗಿ ಹೋಗಿತ್ತು. ಚಿತ್ರೀಕರಣ, ಪರದೀಕರಣ ಹೀಗೆ ಎರಡೂ ಹಂತಗಳಲ್ಲಿ ತುಂಬ ಕ್ಲಿಷ್ಟವೂ, ದುಬಾರಿಯೂ ಆದ ತಂತ್ರಜ್ಞಾನದ ಅಗತ್ಯವಿದ್ದುದರಿಂದ ಆಗಿನ 3-ಡಿಚಿತ್ರ ಹೆಚ್ಚು ಜನಪ್ರಿಯವಾಗಲಿಲ್ಲ.

ತನ್ನ ತಂತ್ರಜ್ಞಾನವನ್ನು ಹೆಚ್ಚು ಸರಳಗೊಳಿಸಿಕೊಂಡು 3-ಡಿ ಚಿತ್ರ ಇತ್ತೀಚೆಗೆ ಭಾರತದಲ್ಲಿ ಮತ್ತೊಮ್ಮೆ ಸುದ್ದಿ ಮಾಡಿತು. ಈ ಬಾರಿ ಈ ಸುದ್ದಿಗೆ ಕಾರಣವಾದದ್ದು ಎಂದರೆ ಭಾರತದ ಪ್ರಪ್ರಥಮ 3-ಡಿ ಚಿತ್ರವಾದ ಮಲೆಯಾಳಂನಲ್ಲಿ ತಯಾರಾದ "ಮೈ ಡಿಯರ್ ಕುಟ್ಟಿಚಾತ್ತನ್" ಎಂಬ ಚಿತ್ರ. ನಂತರ ಇದೇ ಚಿತ್ರದ ಧ್ವನಿಯನ್ನು ಮಾತ್ರ ಹಿಂದಿಯಲ್ಲಿ ಡಬ್ ಮಾಡಿ "ಛೋಟಾ ಚೇತನ್" ಎಂಬ ಹೆಸರಿನಲ್ಲೂ ವ್ಯಾಪಕವಾಗಿ ಪ್ರದರ್ಶಿಸಲಾಯಿತು.

"ಕುಟ್ಟಿಚಾತ್ತನ್"1984ರ ಅತ್ಯುತ್ತಮ ಮಕ್ಕಳ ಚಿತ್ರವೆಂದು ಪ್ರಶಸ್ತಿಯನ್ನೂ ಗಳಿಸಿದೆ. 3-ಡಿ ಪರಿಣಾಮದಿಂದಾಗಿ ಅಷ್ಟೇ ಅಲ್ಲ ಮಕ್ಕಳಿಗೆ ಇಷ್ಟವಾಗುವಂತಹ ಫ್ಯಾಂಟಸಿ, ಹುಡುಗಾಟ, ಹಾಡು, ಕುಣಿತ, ಉತ್ತಮ ಅಭಿನಯ ನೀಡಿರುವ ನಾಲ್ಕು ಜನ ಮಕ್ಕಳು; ಉಳಿದ ದೊಡ್ಡವರ ಹದ್ದುಮೀರದ ಅಭಿನಯ-ಇವೆಲ್ಲದರಿಂದಾಗಿ ಕುಟ್ಟಿಚಾತ್ತನ್ ಮಕ್ಕಳಿಗೆ ಇಷ್ಟವಾಗುತ್ತದೆ.

ಇದಕ್ಕೆ ಸೇರಿದಂತೆಯೆ, ಸುಮಾರು 28 ಪರದೆಯಿಂದೀಚೆ ಬರುವ 3-ಡಿ ಪರಿಣಾಮಗಳು. ಪರದೆಯಿಂದ ಥಿಯೇಟರಿನ ಒಳಗೇ ತೇಲಿ ಬರುವಂತೆ ತೋರುವ ಬಲೂನುಗಳು, ಆಟಿಕೆಯ ಹೆಲಿಕಾಪ್ಟರುಗಳು, ನಮ್ಮೆದುರಿಗೇ ಹಿಡಿದಂತೆ ತೋರುವ ಬಾಟಲು, ಗ್ಲಾಸುಗಳು; ಪರದೆ ಮೇಲಿರುವ ಪಾತ್ರಗಳು ಎಸೆದು ನಮ್ಮ ಮೇಲೆಯೆ ಬಂದು ಬೀಳುವಂತೆ ತೋರುವ ಬಟ್ಟೆ, ಬೆಂಕಿ ಇತ್ಯಾದಿಗಳಿಂದ ದೊಡ್ಡವರಿಗೂ ಆಗಾಗ ಅದ್ಭುತ, ಕೌತುಕ, ಮನೋರಂಜಕ.

ಕುಟ್ಟಿಚಾತ್ತನ್ ಹೊರಬರುತ್ತಿದ್ದಂತೆ ಭಾರತದಲ್ಲಿ ಹಲವು ಭಾಷೆಗಳಲ್ಲಿ 3-ಡಿ ಚಿತ್ರಗಳ ತಯಾರಿಕೆಆರಂಭವಾಯಿತು ಹಿಂದಿಯ ಪ್ರಥಮ 3-ಡಿ ಶಿವಾ ಕ ಇನ್ಸಾಫ್ ಈಗಾಗಲೇ ತೆರೆಕಂಡಿದೆ.ಹೀಗೆಯೆ ಕನ್ನಡದ ಕಾಡಿನಲ್ಲಿಜಾತ್ರೆ ಚಿಕ್ಕ ದೊಡ್ಡ ಎಲ್ಲ ಪಟ್ಟಣಗಳಲ್ಲೂ ನಡೆಯಿತು. ಈ ಲೇಖನ ಬರೆಯುತ್ತಿರುವ ಹೊತ್ತಿಗೆ ಕನ್ನಡದಲ್ಲಿ ನಮ್ಮ ಭೂಮಿ ಸೂಪರ್ ಬಾಯ್ ಇತ್ಯಾದಿರೂ ಈಗಾಗಲೇ 3-ಡಿ ಪಟ್ಟಿಯಲ್ಲಿರುವ ಚಿತ್ರಗಳು. ತಮಿಳಿನಲ್ಲಿ 'ಭೂ ಮಂತಂ ಕಾಳಿ', ತೆಲುಗಿನಲ್ಲಿ 'ವೆಂಕಟೇಶ್ವರ ಸುಲಾಭಾರಂ' ಹಿಂದಿಯಲ್ಲಿ 'ಶಾಂತಿದೂತ' ಇವುಗಳ ನಿರ್ಮಾಣವೂ ಸುದ್ದಿಯಲ್ಲಿದೆ. ಶ್ರೀಮತಿ ಇಂದಿರಾಗಾಂಧಿಯವರ ಜೀವನವನ್ನು ಆಧರಿಸಿದ 'ರಸ್ತೆವಥಾ' ಎಂಬ ಚಿತ್ರವೂ 3-ಡಿಯಲ್ಲಿ ತಯಾರಾಗುತ್ತಲಿದೆ.

ಎಚ್ಚರ, ಎಚ್ಚರ

ಮೊದಲೆ ಚಲನಚಿತ್ರ ಅತ್ಯಂತ ಶಕ್ತಿಯುತ ಮಾಧ್ಯಮ. ಅದರ ಕಥೆ, ದೃಶ್ಯ ಸಂಯೋಜನೆ ಇತ್ಯಾದಿಗಳು ಮುಖ್ಯವಾಗಿ ಮಕ್ಕಳು ಯುವಜನರ ಮೇಲೆ ಎಂಥ ದಟ್ಟ ಪರಿಣಾಮವನ್ನು ಉಂಟುಮಾಡಬಲ್ಲುದು ಎಂದು ಒಳ್ಳೆಯ ನಿದರ್ಶನಗಳಿಂದಲ್ಲದಿದ್ದರೂ, ಸಿನಿಮಾದಂತೆ ನಡೆಯುವ ಕೊಲೆ, ರೇಪ್,ದರೋಡೆಗಳಿಂದಲಾದರೂ ನಮಗೆಲ್ಲ ತಿಳಿದಿದೆ. ಇದು ಸಾಲದು ಎಂಬಂತೆ ಈಗ 3-ಡಿ ಸಿನಿಮಾ ಪ್ರಸ್ತುತದ ಸೆನ್ಸಾರ್ ಕಾನೂನುಗಳು ಹಾಗೂ ಅನಾಹ್ವಾನ ವ್ಯವಸ್ಥೆಯ ಮತಿಯಿಂದಾಗಿ ಸಿನಿಮಾ ಬೃಹತ್ ಪ್ರಮಾಣದಲ್ಲಿ ವ್ಯಾಪಾರೀ ಆಗುತ್ತಿರುವುದನ್ನೆ ನಿಯಂತ್ರಿಸಲು ಆಗಿಲ್ಲ. ಇದೇ ಸೆನ್ಸಾರ್ ಚೌಕಟ್ಟಿನಲ್ಲಿ 3-ಡಿ ಚಿತ್ರಗಳನ್ನೂ ನೋಡುವುದಾದರೆ ಇನ್ನೇನು ಗತಿ?

ನಮ್ಮ ಪ್ರೇಕ್ಷಕರೆ ಈ ಬಗ್ಗೆ ಎಚ್ಚರಿಕೆ ವಹಿಸಬೇಕು. ನಿರ್ಮಾಪಕರೂ ಕೂಡ ತಮ್ಮ ಸಾಮಾಜಿಕ ಈ ಜವಾಬ್ದಾರಿಗಳನ್ನು ಮರೆಯದೆ, ಈಗ ಕೊಡುತ್ತಿರುವ ಕ್ರೌರ್ಯ, ಹಿಂಸೆ, ಅಶ್ಲೀಲ ಕಾಮ, ರೇಪ್ ಇತ್ಯಾದಿಗಳ ಮಸಾಲೆಗಳನ್ನೇ 3-ಡಿಯಲ್ಲೂ ಕೊಡದೆ, ಅದರ ಪರಿಣಾಮದ ಅರಿವಿಟ್ಟುಕೊಂಡು, ಹೆಚ್ಚು ಸುರಕ್ಷಿತವಾದ, ರಂಜಕವಾದ ಶೈಕ್ಷಣಿಕವಾಗಿ ಉಪಯುಕ್ತವಾದ ಚಿತ್ರಗಳನ್ನು ನೀಡಿದರೆ 3-ಡಿ ಯ ಎಲ್ಲ ಡಿ ಗಳೂ ಸಾರ್ಥಕವಾದಾವು.

ಸೌಜನ್ಯ:

(ರಾಜ್ಯ ಸಾಹಿತ್ಯ ಅಕಾದೆಮಿಯ 'ಶ್ರೇಷ್ಠ ಸೃಜನೇತರ ಕೃತಿ' ಪ್ರಶಸ್ತಿ ಪಡೆದ 'ಸಿನಿಮಾ ಮತ್ತು ಪ್ರೇಕ್ಷಕ')

ವಾರದ ಚಿತ್ರ

ಚಿತ್ರ: ಕೇಶವ ವಿಟ

ಅಲೆಮಾರಿ

ನಾನು ಮುಳ್ಳೂರಿನವನು ಕಲ್ಲೂರಿನವನು
ಕೆಸರೂರಿನವನು ಮೊಸರೂರಿನವನು
ಮೋಸವರಿಯದ ಭಾರತೀಯನು

ನಾನು ಹೂವಿನ ಮಗನು ನಾನು ಮುಳ್ಳಿನ ಮಗನು
ವೈರ ಕಾಣುವ ಹೆಂಗಸರ ತಿಂಟಿ ಬೆಂಕಿ ತೋಟದಲ್ಲಿ
ಮಿಂದು ಮಡಿಯಾದವನು ನಾಗರಹೆಡೆಯಾದವನು

ಬೆಂಕಿ ಪರ್ವತವೇರಿ ಬಂದ ಸಾಗರ ಸುಂದರಿ
ಹೊಳೆವ ಹೊನ್ನಾಗರಿ ನನ್ನ ಮದುವೆಯಾದಳು
ಕಾಲವು ಕಾದು ವಿರಹದ ಬೂದಿ ಗುಡ್ಡವಾಯಿತು
ಬೂದಿಗುಡ್ಡವು ಗಾಳಿಗೋಪುರವಾಯಿತು
ಬೂದಿಯೊಳಗೆ ಬೆಂದಾಕೆ ಬೇರೊಬ್ಬಳು ಬೆದೆಗಾತಿ
ನಡು ಜಗವ ಕಡ ಕೊಡುವ ಜಗಸುಂದರಿ ಹೂವಿನ ಕೊಡಲಿ
ಸುಂದರಿ ಹೊನ್ನಾಗರಿ ಉರಿದು ಬೂದಿಯಾದಳು
ಕವಿತೆ ಹೂತೋಟವ ದಾಟಿ ಮರೆಯಾದಳು

ನಕ್ಷತ್ರ ಸೀಮೆಯ ಚಿಕ್ಕ ಹೆಂಗಸು ನನ್ನ ಹೆಂಡತಿ
ಉರಿದು ಬೂದಿಯಾದವಳ ದೇಹ ಬೂದಿಯ ಮೇಲೆ
ಮುಳ್ಳು ಬೇಲಿಯ ನಡುವೆ ನಿರಾಳ ಬೆಳದಿಂಗಳ ಹಾಗೆ
ಕಾಲ ಕಿರು ಗೆಜ್ಜೆಗಳನ್ನು ಘಲಘಲಿಸಿ ನಡೆದುಬಿಟ್ಟಳು
ನನ್ನ ಚೆಲುವೆ ಸಾವಸೂತಕ ಕೆಡಿಸಿಬಿಟ್ಟಳು

ಹೂಮರಕೆ ಮರಗಿಡಕೆ ಗಿರಿಯ ಸುಂದರ ಶಿಖರಕೆ
ಎದೆ ತೆರೆದು ಪ್ರೀತಿ ಝರಿಯನು ಹರಿಸಿಬಿಟ್ಟಳು ನನ್ನ ಮಡದಿ
ಮುನ್ನೂರು ಕೋಟಿ ನರಕದಿಂದ ನನ್ನ ಮೇಲೆತ್ತಿಬಿಟ್ಟಳು
ನಗು ನರಕ ಕನ್ನಡಿಯಿಂದ ವಿಷಸರ್ಪ ಮಂದಿರದಿಂದ
ಹೊರಗೆಳೆದು ಹಸಿರು ಬಯಲಿಗೆ ನನ್ನ ಹರಿಯಬಿಟ್ಟಳು

ಯಾರೂ ಕೇಳರು ಇನ್ನು
ಯಾರೂ ನೋಡರು ಇನ್ನು
ಯಾರೂ ಕೊಡರು ಇನ್ನು
ಯಾರೂ ಸೆಳೆಯರು ಇನ್ನು
ಯಾರೂ ಎಳೆಯರು ನನ್ನ
ಯಾರ ಬೂಟುಗಳ ನನ್ನ
ಮೇಲೆ ಏಳವು ಇನ್ನು

ಉಕ್ಕು ಸರಪಳಿ ಬಿಕ್ಕುತ್ತಾ ಗಿರಿಯ ಚಂದ್ರಮ ಸುಟ್ಟುಹೋದ
ಹೊನ್ನ ನಾಲಗೆ ತಾಕುತ್ತಾ ಸೆರೆಯ ಸೂರ್ಯನು ಕರಗಿ ಹೋದ
ಕಣ್ಣ ಕಾಂತಿ ಮಿನುಗುತ್ತಾ ಬಿರುಗಾಳಿ ಉಳಿಟ್ಟವು
ಹಿಮಾಲಯದೆದೆಯಲ್ಲಿ ಬೆಂಕಿ ಮಾತು ಬರೆದಿಟ್ಟವು
ಮರಣ ಬರೆದ ಇತಿಹಾಸ ಪುಟಗಳ ತೆರೆದಿಟ್ಟವು
ಕಾಲದ ತುಟಿಯಲ್ಲಿ ಲೀಲೆಗಳು ಪುಟಿದವು

ಗುಡ್ಡಗಾಡಿನ ನಡುವೆ ಯಜ್ಞಕುಂಡದ ಬಳಿ
ಜನರ ರುಂಡ ಮುಂಡಗಳ ತರಿದವರ ಕಂಡೆ
ಕಾಡು ಹೂವಿನ ಕಣ್ಣೊಳಗೆ ಬೆಂಕಿ ಉಂಡೆ
ಕಂಡವರ ಸೂಳೆಯ ಪಾದಗಳಲ್ಲಿ ಹೂ ಗುಲಾಬಿ ಕಂಡೆ
ನನ್ನ ರಕ್ತದಲಿ ಮಿಂದ ಚಂದದ ಗುಲಾಬಿ ಕಂಡೆ
ಘಾತಕಗಳ ನಡುವೆ ಪಾಪವಿಲ್ಲದ ಮನಸ್ಸು ಪಾರಿವಾಳ
ಮೋಡಗಳ ನಡುವೆ ಹಾರಿತ್ತು ನೋಡಾ!

ಬೀದಿ ಹಾದರಗಿತ್ತಿ
ಜೀವ ಪಾತರಗಿತ್ತಿ
ಸುಟ್ಟ ಹೂವುಗಳ
ಚಿಟ್ಟೆ ಬೀದಿ ಜಗವು
ಮಾಗಿದ ಹಣ್ಣುಗಳ
ಹೆಕ್ಕಿಕೊಂಡಿತ್ತು ಕಾಲವು!
ಜೀವ ಜಾತ್ರೆಯ
ಮರುಳ ಪಕ್ಷಿಯು
ಇರುಳ ಕಳಚಿ
ಹಾರಿತ್ತು ದೂರಾ!

ಯುಗದ ಕಣ್ಣು ಮೊಗದ ಮೇಲೆ ಬೆಳಕು ಬೀರಿತು
ಸೂರ್ಯ ಕಣ್ಣು ಯುಗದ ಹಗಲ ಹೀರಿ ನರಳಿತು
ಲೋಕಕೆಲ್ಲ ಸರಳ ಸತ್ಯ ಸಾರಿತು ಜೀವ ಬಾಯಾರಿತು
ಮುತ್ತಿನ ಚಿತ್ತಾರವ ಚಿತ್ರಲೋಕದೊಳಗೆ ಬರೆಯಿತು
ತನ್ನ ಮುತ್ತಿನ ಕಡಗವ ಒತ್ತೆಯಿಟ್ಟು ಹತ್ತೂರು ಸೂಳೆ
ತನ್ನ ತನುವ ತಾನೇ ಕತ್ತಲಿಗೆ ಮಾರಿಕೊಂಡಳು
ಯುಗದ ತಲೆಹಿಡುಕ ಚಂದ್ರಮನಿಗೆ ದಕ್ಕಿತು ಮಹಾಕವಿಪ್ರಶಸ್ತಿ
ಕಾಲ ದಂಡಕ್ಕೆ ಯಮನ ಪಿಂಡಕ್ಕೆ ಕಾಲ ಬಾಯಿಬಿಟ್ಟಿತು
ಚಿಕ್ಕ ಲೋಕ ಚಿಕ್ಕದಾಗಿ ಕಣ್ಬಿಟ್ಟಿತು.

ಮಹಾ ಪ್ರಯಾಣದ ದಾರಿಯುದ್ದಕೆ ಯುದ್ಧ ಸನ್ನದ್ಧರ ಕಂಡೆ
ಜೀವ ಹೀರುವ ಕತ್ತಿಗಳ ಕಾಂತಿಗೆ ಮರುಳಾದವರ ಕಂಡೆ
ಯಾರು ಸ್ನೇಹಿತರು ಯಾರು ವೈರಿಗಳು ಯಾರು ಸಮರದ ಮಕ್ಕಳು
ತಿಳಿಯದೇನೆ ತೊಳಲಾಡಿದೆ ಕೆಂಪು ಮರಗಳ ನೆರಳಿನಲ್ಲಿ ನಾನು ನರಳಿದೆ

ಜಗತ್ತಿನ ತಿಳುವಳಿಕೆ ಹೀರಿ ಬೆಳೆದ ಅಗ್ನಿಕುಂಡದಲ್ಲಿ
ಉಳಿದದ್ದು ಬಿಳಿಯ ಬೂದಿ ನರಲೋಕ ವ್ಯಾಧಿ
ಅಲ್ಲಿಗೂ ಬಾಂಬು ನೋಟದ ಬಿಂಬ ಸುಂದರಿಯರು ಬಂದರು
ಆ ಹೆಂಗಸರು ಹಣದ ರಾಶಿಯ ಮೇಲೆ ಹಾದರವ ಗೈದರು
ಜೀವ ಲೋಕವ ಹೀರಿದರು ಕಲ್ಲು ಮಣ್ಣನು ಮಾರಿದರು.

ಗೋಲ ತಿರುಗಿತು ಹಗಲು ರಾತ್ರಿ ಭೂಗೋಲ
ಗೋಲದ ಮೇಲೆ ಸುಳ್ಳು ಪಾತಿವ್ರತ್ಯದ
ಮುಳ್ಳು ಬೇಲಿಗಳಲ್ಲಿ ಉರಿದು ಬೂದಿಯಾದ
ಹಲವು ಬಣ್ಣದ ಹಲವು ದೇಶದ ಹೆಂಗಸರ ಕಂಡೆ
ಮೋನಾಲಿಸಾಳ ಪುರಾತನ ತುಟಿಗಳ ನಡುವೆ
ಅಡಗಿದ ಹಲ್ಲುಗಳು ನರಲೋಕ ನಗುವ
ಗಲ್ಲಿಗೇರಿಸಿ ನಕ್ಕುದ ಕಂಡೆ.

ಸುದೀರ್ಘ ಪ್ರಯಾಣದ ಕೊನೆಯಲ್ಲಿ
ಮೈಲಿಗಲ್ಲುಗಳು ಮೈಲಿಗೆಯಾಗಿವೆ
ದೇಶದೇಶಗಳ ಹೆಸರು ಅಳಿಸಿಹೋಗಿವೆ
ಮಾಮರದ ತುಂಬ ರಕ್ತದ ಹೂಬಿಟ್ಟಿವೆ
ಮುದ್ದು ಮೊಲಗಳು ನರಮಾಂಸ ತಿನ್ನುತ್ತಿವೆ

ಜಗತ್ತಿನ ನೆತ್ತಿಯ ಮೇಲೆ
ಸುತ್ತುವ ಕಾರಿರುಳಲ್ಲಿ
ಹುಲಿಯ ಹದ್ದಿನ ಮಿಲನ
ನೆಲದ ಬೆಂಕಿಯ ಜನನ
ನನ್ನೊಡನೆ ಮಾತಾಡುತ್ತಿವೆ
ಕೋಗಿಲೆಯ ಕಂಠದಲ್ಲಿ
ಹಾಡುಗಳು ಸತ್ತಿವೆ;
ಮತ್ತೆ ಮರಳುತ್ತಿವೆ ರಾತ್ರಿಗಳು
ಮೃತ್ಯು ಪಾತ್ರೆಗಳು

ನಾನು ನಿಂತ ಗಡಿಯಾರ ಮತ್ತು
ನಿಲ್ಲದ ಅಲೆಮಾರಿಯು
ಕಾಲದ ಕಲ್ಲುಬಂಡೆಗಳ ಸಂದಿನಿಂದ
ಹರಿವ ನೀರಿನ ಝರಿಯು
ಜೀವಲೋಕದ ಚಲನಶೀಲ
ಇತಿಹಾಸದ ಮಹಾ ಯಾತ್ರಿಕನು
ನಾನು ಮಣ್ಣು ಹೂವಿನ
ಜೀವದಾಳದ ಕವಿತೆಯು
ದಾರುಣ ಮೌನದ ಕ್ರಿಯಾಶೀಲ
ಅಲೆಮಾರಿಯು!

—ಮುಳ್ಳೂರು ನಾಗರಾಜ್

ಕಾವ್ಯಕನ್ನಿಕೆ 'ಮಿನಿಸ್ಕರ್ಟ್' ಗಳಿಗೇ ಮಾರುಹೋಗುತ್ತಿರುವುದು ಕನ್ನಡ ಕಾವ್ಯ ಪ್ರಪಂಚದ ಇತ್ತೀಚಿನ ದೌರ್ಬಲ್ಯ. ಕವಿಯಾಗಿ ಒಳ್ಳೆಯ ಹೆಸರು ಪಡೆದಿರುವ ಮುಳ್ಳೂರು ನಾಗರಾಜ್ ಈ ವಾರದ 'ಸಾಹಿತ್ಯ ಸಂಗತ' ಅಂಕಣದಲ್ಲಿ ತಮ್ಮ ದೀರ್ಘ ಕಾವ್ಯದ ಜತೆ 'ಅಲೆಮಾರಿ'ಯಾಗಿದ್ದಾರೆ. ನವ್ಯದ ನಂತರ ನಿಂತ ನೀರಿನಂತಾಗಿರುವ ಕನ್ನಡ ಕಾವ್ಯ ಜಗತ್ತಿನಲ್ಲಿ ನವ್ಯೋತ್ತರದ ಕವಲು ದಾರಿಗಳನ್ನು ತಡಕಾಡುತ್ತಿರುವ ಮುಳ್ಳೂರು ನಾಗರಾಜರ ಈ ಕವನ ಪ್ರಾತಿನಿಧಿಕವೆಂಬ ಹಿನ್ನೆಲೆಯಲ್ಲಿ ಇಲ್ಲಿ ನೀಡುತ್ತಿದ್ದೇನೆ.

—ಸಂ.

ಸಾಹಿತ್ಯ ಸಂಗತ

ನೆನಪಿನ ಪಯಣ

(ಆರನೆ ಪುಟದಿಂದ)

...ಳ್ಳಿನ ಸೀಟು ಭರ್ತಿಯಾಗಿತ್ತು. ಅಲ್ಲಿ ಪತಿ, ಪತ್ನಿ, ಮಕ್ಕಳ ಒಂದು ಸಣ್ಣ ಕುಟುಂಬವೇ ಇತ್ತು. ಅಲೆಮಾರಿಗಳಂತೆ ಕಂಡ ಮತ್ತಷ್ಟು ಜನ ಬಂದು ದಾರಿಯ ಮೇಲೆಯೇ ಕುಳಿತರು. ರೈಲು ಸಾಗಿತು. ಇತ್ತ ಕಿಕ್ಕಿರಿದು ತುಂಬಿದ ಬಗ್ಗೆ ಅವರ ಮೇಲೆ ಸಿಟ್ಟು ಬಂತು. ಪೆನ್ನ ಎಡೆ ಹುಚ್ಚು ನೂರಾಯ್ತಲ್ಲ. ಕನಸಿನಲ್ಲಿ ತಿಂದ ಪೆಟ್ಟಿನ ನೆನಪಾಗಿ ಮಾತನಾಡುವ ಬಯಕೆಯಾಗಲಿಲ್ಲ. ಕೆಳಗಡೆ ಕುಳಿತವರು ಏನೇನೋ ಮಾತನಾಡುತ್ತಿದ್ದರು. ರೈಲು ಓಡುವಾಗ ಕುಲುಕುತ್ತಿದ್ದ ಆಕೆಯತ್ತ ಆಗಾಗ ಕಣ್ಣು ಹಾಯಿಸುತ್ತಿದ್ದೆ. ಬೆಂಗಳೂರಿನ ತನಕವೂ ಆಕೆ ಜೊತೆಯಾಗಿರಲಿ ಎಂದೆನಿಸಿತು. ಹಿಂಬದಿಯಲ್ಲಿ ಕುಳಿತಿದ್ದವರ ಮಾತುಗಳು ಕಿವಿಗೆ ಹಿಂಸೆಯಾಗಿತ್ತು. ಅವರಿಗೆ ಸುಮ್ಮನಿರುವಂತೆ ಬೈಯಬೇಕೆನಿಸಿತು. ಆದರೆ ಅವರಿಂದಲೇ ಬೈಸಿಕೊಂಡರೆ ಆಕೆಯೆದುರು ಅವಮಾನವಾಗುವುದು ಬೇಡವಾಗಿತ್ತು, ಸುಮ್ಮನೆ ಕುಳಿತೆ.

ಆಕೆ ಸೆರಗನ್ನು ಪೂರ್ತಿ ಹೊದ್ದು ಮಲಗಿದಳು. [illegible]. ಸ್ವಲ್ಪ ಹೊತ್ತಿನಲ್ಲಿ ಕಣ್ಣು ಮುಚ್ಚಿಕೊಂಡಳು. ಆದರೂ ಆಕೆ ಚಂದ ಕಾಣುತ್ತಿದ್ದಳು. ಆಯಾಸಗೊಂಡಂತಿತ್ತು. ಆಕೆ ಆ ಕಡೆ ಹೊರಳಿ ಬೆನ್ನು ತೋರಿಸಿ ಮಲಗಿದಳು. ನಿರಾಸೆಯಾಗಿ ನಾನೂ ಮಲಗಿಕೊಂಡೆ. ಏಕೋ ಗದ್ದಲದಲ್ಲಿ ನಿದ್ರೆಯೇ ಬರಲಿಲ್ಲ. ನಿಧಾನವಾಗಿ ನಿದ್ರೆಗೆ ಜಾರಿದ್ದು ಅರಿವಿಗೇ ಬಂದಿರಲಿಲ್ಲ. ಎಚ್ಚರವಾದಾಗ ಗಂಟೆ ನಾಲ್ಕು ತೋರಿಸುತ್ತಿತ್ತು. ಗದ್ದಲ ಕಡಿಮೆಯಾಗಿತ್ತು. ಬಹುಶಃ ಎಲ್ಲರಿಗೂ ನಿದ್ದೆ ಬಂದಿತ್ತೇನೋ. ಬೆಂಗಳೂರು ಸಮೀಪಿಸಿತ್ತು. ತಕ್ಷಣ ನೆನಪಿಗೆ ಬಂದಳು ಆಕೆ. ತಟ್ಟನೆ ಎದ್ದು ಕುಳಿತೆ. ಎದುರಿನ ಜಾಗ ಖಾಲಿಯಾಗಿತ್ತು. ತೀವ್ರ ನಿರಾಶೆಯಾಯ್ತು. ಇಳಿದು ಹೋದಳೇ ಇಲ್ಲ; ಮೊದಲಿನಂತೆ ಟಾಯ್ಲೆಟ್ಟಿಗೆ... ಯೋಚಿಸಿದೆ. ಆದರೆ ಪೂರ್ತಿ ಜಾಗ ಖಾಲಿಯಾಗಿತ್ತು. ಆಕೆ ಯಾವ ಸ್ಟೇಶನ್‌ನಲ್ಲಿ ಇಳಿದಳೋ ತಿಳಿಯಲಿಲ್ಲ. ಆದರೆ ಆಕೆ ಇಳಿದು ಹೋಗಿರುವುದು ಖಚಿತವಾಗಿತ್ತು.

ಬೆಂಗಳೂರು ತಲುಪಿತು, ಮೈ ಕೊರೆಯುವ ಚಳಿಯತ್ತ ಗಮನವಿರಲಿಲ್ಲ. ದೀರ್ಘ ಪ್ರಯಾಣವು ಆಕೆಯ ನೆನಪಿಂದ ಸುಲಭವಾಗಿ ಕಳೆದಿತ್ತಾದರೂ ನೀರಸವೆನಿಸಿತು. ಆಕೆಯ ಬಗ್ಗೆ ಏನೊಂದೂ ತಿಳಿಯಲಾರದೆ ಚಡಪಡಿಸಿದೆ. ಕೆಳಗಿಳಿದು ನಿಲ್ದಾಣದಿಂದ ಹೊರ ಬಂದೆ. ಈಗ ನೆನಪಿನಲ್ಲುಳಿದದ್ದು ಆಕೆ ಮಾತ್ರ.

ಒಂದು ಸಿಂಹದ ಕಥೆ

ಮಕ್ಕಳ ತೋಟ

ಕಾಡಿನಲ್ಲೊಂದು ಕ್ರೂರ ಸಿಂಹ ವಾಸವಾಗಿತ್ತು. ಅದು ಬೇಟೆಯಾಡಲು ಹೊರಟಿತೆಂದರೆ ಇಡೀ ಕಾಡೇ ಗಡ ಗಡ ನಡುಗುತ್ತಿತ್ತು. ಅದರ ಗರ್ಜನೆಗೆ ಎಷ್ಟೋ ಪ್ರಾಣಿಗಳು ಹೆದರಿ ಸಾಯುತ್ತಿದ್ದವು. ಅಂತಹ ಸಿಂಹವು ಒಂದು ದಿನ ಬೇಟೆಯಾಡಲು ಹೊರಟಿತು. ಅದರ ಗರ್ಜನೆಗೆ ಎಲ್ಲಾ ಪ್ರಾಣಿಗಳು ಹೆದರಿ ದಿಕ್ಕೆಟ್ಟು ಓಡಿದವು. ಸಿಂಹವು ಗರ್ಜಿಸುತ್ತಾ ಜೋರಾಗಿ ಬರುತ್ತಿತ್ತು.

ದೂರದಲ್ಲಿ ಬಸುರಿ ಜಿಂಕೆಯೊಂದು ಸಿಂಹದ ಗರ್ಜನೆ ಕೇಳಿ ಮರಿಯೊಂದನ್ನು ಹಾಕಿತು. ಮತ್ತು ಹೆದರಿಕೆಯಿಂದ ತಾಯಿ ಜಿಂಕೆ ಸತ್ತು ಹೋಯಿತು. ಮರಿ ಜಿಂಕೆಯು ಸತ್ತ ತಾಯಿಯ ಹಾಲನ್ನು ಕುಡಿಯಲು ತಡಕಾಡುತ್ತಿತ್ತು. ಸಿಂಹಕ್ಕೆ ಮರಿ ಜಿಂಕೆಯ ಅವಸ್ಥೆಯನ್ನು ನೋಡಿ ಕರುಣೆ ಹುಟ್ಟಿತು. ತನ್ನ ಗರ್ಜನೆಯಿಂದಾಗಿ ತಾಯಿ ಜಿಂಕೆ ಸತ್ತು, ಇದು ಅನಾಥವಾಯಿತೆಂದು ಕೊಂಡಿತು. ಅದು ಆ ಪುಟ್ಟ ಮರಿಯನ್ನು ತನ್ನ ಗುಹೆಗೆ ತಂದಿತು. ತನ್ನ ಹಾಲನ್ನೆ ಮರಿಗೆ ಉಣಿಸಿತು.

ಹೀಗೆ ಜಿಂಕೆ ಮರಿಯು ಸಿಂಹದ ಹಾಲನ್ನು ಕುಡಿಯುತ್ತ ದೊಡ್ಡದಾಯಿತು. ಕಾಡಿನ ಎಲ್ಲ ಪ್ರಾಣಿಗಳಿಗೂ ಸಿಂಹ ಮತ್ತು ಜಿಂಕೆ ಮರಿಯ ಸಂಬಂಧ ನೋಡಿ ಆಶ್ಚರ್ಯವಾಗುತ್ತಿತ್ತು. ಸಿಂಹವು ಜಿಂಕೆ ಮರಿಯ ಸಹವಾಸದಿಂದ ತನ್ನ ಕ್ರೌರ್ಯ ಬಿಟ್ಟಿತು. ಸಾಧು ಪ್ರಾಣಿಯಂತೆ ಕಾಡಿನಲ್ಲಿ ಅದು ಎಲ್ಲ ಪ್ರಾಣಿಗಳೊಂದಿಗೆ ಬೆರೆಯುತ್ತಿತ್ತು.

ಸಿಂಹವನ್ನೆ ನೆಚ್ಚಿಕೊಂಡು ಅದನ್ನು ಹೊಗಳಿಕೊಂಡು ಬದುಕುತ್ತಿದ್ದ ನರಿ ತೋಳ ಕಿರುಬಗಳಿಗೆ ಅಸಮಾಧಾನವಾಯ್ತು. ಹೇಗಾದರೂ ಮಾಡಿ ಸಿಂಹ ಮತ್ತು ಜಿಂಕೆ ಮರಿಯ ಸಂಬಂಧವನ್ನು ಕೆಡಿಸಬೇಕೆಂದು ಅವು ಯೋಚಿಸಿದವು. ಹೀಗೆ ಪ್ರಯತ್ನ ಮಾಡಲು ಹೊರಟ ತೋಳವು ಜಿಂಕೆ ಮರಿಯ ಮೇಲೆ ಚಾಡಿ ಹೇಳಿತು. "ಸಿಂಹ ರಾಜ ನೀವೆಲ್ಲಿ, ಆ ಸಾಧುಗಾಡು ಜಿಂಕೆ ಮರಿಯೆಲ್ಲಿ, ಅಂತಹ ಬಿಕನಾಸಿ ಜಿಂಕೆ ಮರಿಯನ್ನು ನೀನು 'ಓಡಿಸಬಾರದೇ' ಎಂದು ಕೇಳಿತು. ಸಿಂಹವು ಕೋಪದಿಂದ "ಎಲ್ಲೆ ತೋಳವೇ, ಇನ್ನೊಂದು ಸಲ ನೀನು ನನ್ನ ಜಿಂಕೆ ಮರಿಯ ಮೇಲೆ ಏನಾದರೂ ಚಾಡಿ ಹೇಳಿದರೆ ನಿನ್ನನ್ನೇ ಈ ಕಾಡಿನಿಂದ ಒದ್ದು ಹೊರ ಹಾಕುತ್ತೇನೆ. ಎಂದಿತು.

ಹೀಗಾಗಿ ನರಿ ಮತ್ತು ಕಿರುಬಗಳಿಗೆ ಅಪ್ರತ್ಯಕ್ಷವಾಗಿ ಎಚ್ಚರಿಕೆ ನೀಡಿದಂತಾಗಿತ್ತು. ಅವುಗಳು ಒಂದು ದಿನ ಗುಪ್ತವಾಗಿ ಸಭೆ ನಡೆಸಿದವು. ನರಿಯೆಂದಿತು, "ನಮ್ಮ ರಾಜ ಸಿಂಹ, ಜಿಂಕೆ ಮರಿಯ ಸಹವಾಸದಿಂದ ಪ್ರಾಣಿಗಳ ಬೇಟೆಯಾಡದೆ ಬರಿಯ ಹಣ್ಣು, ಹಂಪಲು ಇವುಗಳನ್ನೆ ತಿಂದು ಬದುಕುತ್ತಿದ್ದಾನೆ. ಇದರಿಂದ ನಮಗೆ ಹಿಂದೆ ಸಿಂಹ ತಿಂದು ಬಿಡುತ್ತಿದ್ದ ಮಾಂಸವು ಸಿಗದಂತಾಗಿದೆ. ಜಿಂಕೆ ಮರಿಯಿರುವ ತನಕ ನಮ್ಮ ಸಿಂಹರಾಜನಿಂದ ನಾವು ಇದನ್ನು ಬಯಸುವಂತಿಲ್ಲ. ಅದುದರಿಂದ ಒಂದೇ ಒಂದು ದಾರಿಯೆಂದರೆ, ಜಿಂಕೆ ಮರಿಯನ್ನು ಮುಗಿಸುವುದು" ಎಂದಿತು. ಕೂಡಲೇ ತೋಳವೆಂದಿತು. "ನೀವೆಲ್ಲ ಸರಿಯೆಂದರೆ ಸಿಂಹರಾಜ ಹೊರಗೆ ಹೋದಾಗ ನಾನು ಜಿಂಕೆ ಮರಿಯ ಕತೆಯನ್ನು ಮುಗಿಸಿ ಹಾಕುತ್ತೇನೆ. ಆ ಮೇಲೆ ಎಲ್ಲಾ ಸೇರಿ ಅದನ್ನು ತಿಂದು ಮುಗಿಸುವಾ" ಎಂದಿತು.

ಅದರಂತೆ ಸಿಂಹವು ಹೊರಗೆ ಹೋಗುವುದನ್ನೆ ಕಾಯುತ್ತಿದ್ದ ತೋಳವು ಜಿಂಕೆ ಮರಿಯ ಮೇಲೆ ಹಾರಿ ಒಂದೇ ಏಟಿಗೆ ಸಾಯಿಸಿತು. ನರಿ ಮತ್ತು ಕಿರುಬಗಳು ಜಿಂಕೆ ಮರಿಯ ಮಾಂಸವನ್ನು ಸ್ವಲ್ಪವೂ ಉಳಿಸದಂತೆ ತಿಂದು ಹಾಕಿದವು.

ಹೊರಗೆ ಹೋಗಿದ್ದ ಸಿಂಹರಾಜವು ಜಿಂಕೆ ಮರಿಗಾಗಿ ಕಾಡಿನಲ್ಲಿದ್ದ ಒಳ್ಳೆಯ ಸೊಪ್ಪು, ಹಣ್ಣು, ಹಂಪಲುಗಳನ್ನು ತೆಗೆದು ಕೊಂಡು ಬಂದಿತು. ನೋಡಿದರೆ ಒಳಗೆ ಜಿಂಕೆ ಮರಿ ಕಾಣಲಿಲ್ಲ. ಗುಹೆಯೊಳಗೆ ರಕ್ತದ ಕಲೆ ಕಾಣಿಸಿತು. ಯಾವುದೋ ತನ್ನೊಂದಿಗೆ ಇರುವ ಪ್ರಾಣಿಯು ತಾನಿಲ್ಲದ ವೇಳೆಯಲ್ಲಿ ಜಿಂಕೆ ಮರಿಯನ್ನು ತಿಂದು ಹಾಕಿರಬೇಕೆಂದು ಯೋಚಿಸಿತು. ಅದರ ರಕ್ತ ಕುದಿಯಿತು. ಇಡೀ ಗುಹೆಯೇ ಪ್ರತಿಧ್ವನಿಸುವಂತೆ ಸಿಂಹವು ಗರ್ಜಿಸಿತು. "ಎಲ್ಲಿ ಕಿರುಬ ತೋಳ ನರಿಗಳೇ ಎಲ್ಲಿದ್ದೀರಿ. ಬನ್ನಿರಿ ಇಲ್ಲಿ" ಎಂದಿತು.

ತೋಳ ನರಿ ಮತ್ತು ಕಿರುಬಗಳು ಸಿಂಹದ ಎದುರುಗಡೆ ಬಂದು ನಿಂತವು. ಅವುಗಳ ಬಾಯಿಂದ ಜಿಂಕೆ ಮರಿಯ ಮಾಂಸದ ವಾಸನೆ ಬರುತ್ತಿತ್ತು. ಬಾಯಿ ಮುಸುಡಿಯಲ್ಲಿ ರಕ್ತದ ಕಲೆ ಕಾಣಿಸಿತು. ಅವುಗಳ ದುರ್ಬುದ್ಧಿ ಸಿಂಹಕ್ಕೆ ಅರ್ಥವಾಯಿತು. ಕೂಡಲೇ ಅದು ರೌದ್ರದಿಂದ ತೋಳ ನರಿ ಮತ್ತು ಕಿರುಬವನ್ನು ತನ್ನ ಪಂಜದಿಂದ ಹೊಡೆದು ಹೊಡೆದು ಸಾಯಿಸಿತು. ಅವುಗಳ ದೇಹವನ್ನು ಎಲುಬನ್ನು ಕಿತ್ತು ಕಿತ್ತು ಹಾಕಿತು. ಆದರೂ ಅದರ ಸಿಟ್ಟು ತಣ್ಣಗಾಗಲಿಲ್ಲ. ಅದರ ಕಲೆ ಬಿಟ್ಟು ಹಿಡಿದು ಮನಶ್ಶಾಂತಿ ಕದಡಿ ಹೋಗಿತ್ತು. ಇನ್ನು ಮುಂದೆ ಯಾರಿಗಾಗಿ ತಾನು ಬದುಕಬೇಕೆಂದು ಯೋಚಿಸಿ, ತನ್ನ ಮುದ್ದು ಜಿಂಕೆ ಮರಿಯನ್ನು ನೆನೆಯುತ್ತಾ, ಅಳುತ್ತಾ ಬೆಟ್ಟದ ಮೇಲಿಂದ ಹಾರಿ ಸಿಂಹವು ಪ್ರಾಣ ಬಿಟ್ಟಿತು.

ಎಂ. ಆರ್. ಮಂಜುನಾಥ ಎಂ ಎ

ಮಾಗಿಯ ಚಳಿ

ಮಾಗಿಯ ಚಳಿ
ಮೋಡದ ಬಳಿ
ಕಂಬಳಿಯೊಳಗೆ
ನೀರಿಗೆ ಇಳಿ
ಚಳಿ ಚಳಿ ಚಳಿ
ವಿಮಯುವವರೆಗೆ
ಸುಗ್ಗಿಯ ಚಳಿ
ತಗ್ಗಿನ ಇಳಿ
ಜಾರಿಸವರೆಗೇ
ಕಿಲಕಿಲ ನಗು
ಹೂವಿನ ಬಿರಿ
ಮಾಳವನು ಬೀರೀ
ಮಾಹಿನ ಪಿಂಡಿ
ಕೋಗಿಲೆ ಮರಿ
ರಾಗದ ಹಾಡಿ

—ಚೇತನಾ ಹರಿರಾಂ
ಕ. ಕಿ. ಲೇ. ಕೂಟ

ಮಣ್ಣಿನ ಮನೆ

ಒಂದು ಕಾಡಿನಲ್ಲಿ ಪ್ರಾಣಿಗಳೆಲ್ಲಾ ಒಗ್ಗಟ್ಟಿನಿಂದ ಇದ್ದುವು. ಆಹಾರ ಸಂಪಾದನೆಯಲ್ಲೂ ಪರಸ್ಪರ ಸಹಕರಿಸುತ್ತಿದ್ದವು. ಆದರೆ ಅವುಗಳಿಗೆ ಬಿಸಿಲು, ಮಳೆ, ಗಾಳಿಯನ್ನು ತಡೆಯಲು ಮನೆಯೊಂದೇ ಇರಲಿಲ್ಲ. ಆದುದರಿಂದ ಆ ಪ್ರಾಣಿಗಳು ತಮ್ಮದೇ ಆದ ಮನೆಯನ್ನು ಕಟ್ಟಲು ಯೋಚಿಸಿದುವು. ಅದರಂತೆ ಉತ್ತಮ ಜಾಗವನ್ನು ಆರಿಸಿ ನೆಲಸಮ ಮಾಡಿದವು. ನಂತರ ಮಣ್ಣಿನ ಗೋಡೆಯನ್ನು ಕಟ್ಟಿ ಮನೆಯ ಮಾಡಿಗೆ ಮರದ ರೆಂಬೆಕೊಂಬೆಗಳನ್ನಿಟ್ಟು ತೆಳ್ಳನೆ ಮಣ್ಣು ಹಾಸಿದುವು. ಅಂತೂ ಅಂದವಾದ ಮಣ್ಣಿನ ಮನೆ ತಯಾರಾಯಿತು. ತಾವು ಕಟ್ಟಿದ ಅಪರೂಪವಾದ ಮನೆಯ ಗೃಹ ಪ್ರವೇಶ ಮಾಡಬೇಕೆಂದು ಪ್ರಾಣಿಗಳು ಯೋಚಿಸಿದುವು. ಗೃಹ ಪ್ರವೇಶಕ್ಕೆ ಅಕ್ಕಪಕ್ಕದ ಕಾಡಿನಲ್ಲಿರುವ ಎಲ್ಲಾ ಪ್ರಾಣಿ ಪಕ್ಷಿಗಳನ್ನೂ ಕರೆಯಲಾಯಿತು. ಗೃಹಪ್ರವೇಶದ ನಿಗದಿತ ದಿನ ಪ್ರಾಣಿಗಳೆಲ್ಲಾ ಬಂದು ಸೇರಿದುವು. ಇನ್ನೇನು ಕಾರ್ಯಕ್ರಮ ಪ್ರಾರಂಭವಾಗಬೇಕೆನ್ನುವಷ್ಟರಲ್ಲಿ ಮಣ್ಣಿನ ಮನೆಯು ದೊಪ್ಪನೆ ನೆಲಕ್ಕುರುಳಿತು. ಪ್ರಾಣಿಗಳಿಗೆಲ್ಲಾ ಬಹಳ ಬೇಸರವಾಯಿತು. ಆದರೂ ಅವುಗಳು ಇನ್ನೊಂದು ಮನೆಯನ್ನು ತಯಾರು ಮಾಡಿದುವು. ಅದೂ ಮನೆಯೂ ಮುರಿದು ಬಿತ್ತು. ಆಗ ಆ ಪ್ರಾಣಿಗಳಿಗೆ ದಿಕ್ಕೇ ತೋಚದಾಯಿತು. ತಾವು ಕಟ್ಟಿದ ಮನೆಗಳು ಮುರಿದು ಬೀಳಲು ಕಾರಣವೂ ಅವುಗಳಿಗೆ ತಿಳಿಯಲಿಲ್ಲ. ತಮ್ಮ ಸಮಸ್ಯೆಯನ್ನು ಬಗೆಹರಿಸಲು ಅವುಗಳೆಲ್ಲಾ ಒಟ್ಟಾಗಿ ದೇವರನ್ನು ಪ್ರಾರ್ಥಿಸಿದುವು. ದೇವರು ಪ್ರತ್ಯಕ್ಷರಾದಾಗ ಪ್ರಾಣಿಗಳು ತಮ್ಮ ಸಂಕಷ್ಟವನ್ನು ಹೇಳಿಕೊಂಡವು. ಆಗ ದೇವರು ನಸುನಗುತ್ತಾ 'ಅಯ್ಯಾ ಪ್ರಾಣಿಗಳಾ, ನೀವು ಗೃಹಪ್ರವೇಶಕ್ಕೆ ಇಲಿಗಳನ್ನು ಕರೆಯದ ಕಾರಣ ಅವುಗಳಿಗೆ ಸಿಟ್ಟು ಬಂದಿದೆ. ಅವುಗಳು ನಿಮ್ಮ ಮನೆಯ ಗೋಡೆಗಳನ್ನು ಕೊರೆದು ಮನೆಯನ್ನು ನೆಲಕ್ಕುರುಳಿಸಿದ್ದಾವೆ' ಎಂದರು. "ನೀವೇ ಸಮಸ್ಯೆ ಬಗೆಹರಿಸಬೇಕು ದೇವಾ" ಎಂದು ಪ್ರಾಣಿಗಳೆಲ್ಲಾ ಒಕ್ಕೊರಲಿನಿಂದ ಬೇಡಿಕೊಂಡವು. ಆಗ ದೇವರು ಇಲಿಗಳನ್ನು ಕರೆದು 'ಅನ್ಯರ ಏಳಿಗೆಯನ್ನು ಕಂಡು ಹೊಟ್ಟೆಕಿಚ್ಚು ಪಡಬಾರದು ಮತ್ತು ಇತರರಿಗೆ ತೊಂದರೆ ಮಾಡಬಾರದು' ಎಂದರೂ ಇಲಿಗಳು ಒಪ್ಪಲಿಲ್ಲ. ದೇವರು ಬೇರೆ ದಾರಿ ಕಾಣದೆ ಬೆಕ್ಕನ್ನು ಸೃಷ್ಟಿಸಿ "ಅಯ್ಯಾ ಬೆಕ್ಕೇ. ಈ ಇಲಿಗಳೇ ನಿನ್ನ ಮುಖ್ಯ ಆಹಾರ. ಅವುಗಳನ್ನು ಕಂಡಲ್ಲಿ ಕೊಂದು ತಿನ್ನು" ಎಂದರು. ಬೆಕ್ಕನ್ನು ನೋಡಿದ ಇಲಿಗಳು ಚೆಲ್ಲಾಪಿಲ್ಲಿಯಾಗಿ ಓಡಿದವು. ನಂತರ ಆ ಪ್ರಾಣಿಗಳು ಬೆಕ್ಕನ್ನು ತಮ್ಮ ಸಂಗಾತಿಯನ್ನಾಗಿರಿಸಿಕೊಂಡು ಮಣ್ಣಿನ ಮನೆ ಕಟ್ಟಿ ಅದರಲ್ಲಿ ಸಂತೋಷದಿಂದ ವಾಸಿಸತೊಡಗಿದುವು.

—ಜಿ. ರಾಮಣ್ಣ ಆಲೆಟ್ಟಿ

ಗಿಳಿ ಮರಿಗಳು

ಗೂಡಲೆರಡು ಗಿಳಿ ಮರಿ
ಆಡುತ್ತಿತ್ತು ಹಿಗ್ಗಿ ಹಿಗ್ಗಿ
ಕಣ್ಣು ಬಿಡುತ್ತಿತ್ತು ಪಿಳಿಪಿಳಿ

ಅದನ್ನು ಕಂಡು ಒಂದು ನರಿ
ಆಸೆ ಹುಟ್ಟಿ ಪ್ರೀತಿಯಿಂದ
ತನ್ನ ಬಳಿಗೆ ಕರೆಯಿತು.

ಗಿಳಿಮರಿಗಳು ಹಾರಿ ಬಂದು
ನರಿ ಬಳಿಗೆ ಕುಳಿತವು
ನರಿ ಅವನ್ನು ತಿಂದು ಮುಗಿಸಿ
ಸಂತೋಷದಿಂದ ತೇಗಿತು.

—(ಕವಿತಾ ೩ನೇ ತರಗತಿ)
ಕ. ಕಿ. ಲೇ. ಕೂಟ

ಆಲಿಕಲ್ಲು

ಆನೆಯ ಬಾನಂಗಳದಲಿ
ಕಾಸ ಆಲಿಕಲ್ಲುಗಳು ಉರುಳುತಿವೆ
ಒಂದೊಂದಾಗಿ,
ಹೆಕ್ಕಲು ಹೋದಲ್ಲಿ ಕರಗಿ
ಮಾಯವಾಗುತ್ತ ಮರೆಯಾಗುತಿವೆ.
ಒಂದಾದ ಮೇಲೊಂದು
ಮಿನುಗುತ್ತ ನನ್ನೆದೆಯ
ಆರ್ತಿಯನು ಕೆರಳಿಸಿ
ಕಬ್ಬಿಸುತ್ತಿವೆ ಕಲ್ಪನೆಯ ಕಾಮನಬಿಲ್ಲ,
ಪುಟಿತ್ತಿಸಂದದಿ ನಗುತ
ಕ್ಷಣದಿ ಕರಗುವ
ಭಾವದುಂಗುರಗಳಿವು ಕೈ
ಬೀಸಿ ಕರೆಯುತಿವೆ.
ಮನದ ದ್ವಂದ್ವಗಳಿಗೆಲ್ಲ
ಇನಿತು ಸಿಂಚನ ಹನಿಸಿ
ಸ್ಪಂದಿಸುವಾ ಮೊದಲೆ
ಜಡವಾಗಿಸಿ ಮನವ
ಬರಿದಾಗಿಸಿ,
ನಿಲುಕದಾ ನಕ್ಷತ್ರಕೆ ಕೈ
ಚಾಚುವಂತೆ ಮಾಡುವ
ಈ ಮುತ್ತು ಮಣಿಗಳ ಆಟ
ಕಣಕಾಟವೋ...
ಕಣ್ಣಾ ಮುಚ್ಚಾಲೆಯೋ...

—ರುಕ್ಮಿಣಿ ಪಿ. ಕೆ. ವಿಶ್ವಕರ್ಮ

ಚಿತ್ರ: ಕೇಶವ ವಿಟ್ಲ